ಕೊರವಂಜಿ

A. ANANTHIAH.

ಸಂಪುಟ ೨೨ ಜನವರಿ ೧೯೬೦ ಸಂಚಿಕೆ ೧೦

ಪ್ರಪ್ರಥಮ ಶಾಂತಿ ದೂತನೆಂದು ಹೆಸರಾಂತನಾದ ಯೇಸುವಿನ ಶಕದ ರೀತ್ಯಾ ಆರಂಭಿಸುವ ಹೊಸ ವರ್ಷದಲ್ಲಿ ನಮ್ಮ ಓದುಗರಿಗೂ ಲೇಖಕರಿಗೂ, ಜಾಹಿರಾತುದಾರರಿಗೂ ಅಭಿಮಾನಿಗಳಿಗೂ, ಜೀವಂತರೆಲ್ಲರಿಗೂ, ರೆಲ್ಲದಕ್ಕೂ, ಸಕಲ ಸನ್ಮಂಗಳಾಗಲಿ ಎಂದು ಆತನನ್ನು ಪ್ರಾರ್ಥಿಸುತ್ತೇವೆ.

ಅಂದಿನ ಶಾಂತಿ ದೂತನ ಸೋಗಿನಲ್ಲೇ ಇಂದೂ ಹಲವಾರು ಶಾಂತಿ ದೂತರು ಕಾಣಿಸಿಕೊಂಡಿರುವಂತೆ, ಯಶಸ್ವಿಯಾಗಿ ಕಾಣಿಸಿಕೊಂಡಿರುವಂತೆಯೇ, ನಮ್ಮ ಕೊಂಡು ಓದುವ ಓದುಗರೂ ಹಲವಾರು ಪ್ರಮಾಣದಲ್ಲಿ ಮಿತಿಮೀರಿ ಹೆಚ್ಚಾಗಲೆಂದೂ, ಹಾಗಾಗಿ ನಷ್ಟಪರಾದ ನಮ್ಮ ಹೊರೆಯು ಕಡಿಮೆಯಾಗಲೆಂದೂ ಆತನನ್ನು ಪ್ರಾರ್ಥಿಸುತ್ತೇವೆ.

ಸಮಸ್ತರಿಗೂ ಸಕಲಸನ್ಮಂಗಳೂ ಆಗಲಿ.

ಪತ್ರಿಕಾನಷ್ಟಪರು.

ಕುಹಕಿಡಿಗಳು

ಕ್ರಿಕೆಟ್ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾದ ಹೆಸರಾಂತ ಆಟಗಾರರ ಮೇಲೆ ಭಾರತವು ಕಾನ್‌ಪುರದಲ್ಲಿ ಗೆದ್ದ ಪ್ರಯುಕ್ತ ಹಿಂದೂಗಳಲ್ಲಿ ಸುಮಾರು ಜನರು ಕ್ರಿಸ್‌ಮಸ್ ಹಬ್ಬವನ್ನು ಬಲು ಅದ್ದೂರಿಯಿಂದ ನಡೆಸಿದರಂತೆ!!

*　　*　　*　　*

ಕ್ರಿಕೆಟ್ ಟೆಸ್ಟ್ ಆಡುವಾಗ, ಕಂಟ್ರಾಕ್ಟರ್ ಬಾರಿಸಿದ ಚೆಂಡಿಗೆ ಬೆದರಿ ಹಾರ್ವೆಯು ಬೆನ್ನು ತೋರಿಸಿದನಂತೆ ಆಗ ಕಾಲುಗಳ ಮಧ್ಯೆ ಚೆಂಡು ಸಿಕ್ಕಿ ಹಾಕಿಕೊಂಡಿತಂತೆ. ಬೇಗ ಬೆನೊ ಬಂದು ಚೆಂಡನ್ನು ಬಿಡಿಸಿಕೊಂಡು 'ಕ್ಯಾಚ್' ಹಿಡಿದನಂತೆ. ಕಂಟ್ರಾಕ್ಟರ್ ಔಟ್ ಆದನಂತೆ.

—ದೇವರು ವರ ಕೊಡೋ ಕಾಲದಲ್ಲಿ ಹೀಗೇನೇ!! ಹಿಂತಿರುಗಿಸಿದರೂ ಬಿಡುಲ್ಲ ಒದ್ದು ಕೊಡ್ತಾನೆ!!

*　　*　　*　　*

ರೂಪಾಯಿನ ಬೆಲೆಯು ಹೆಚ್ಚು ಇಳಿದಿಲ್ಲ ಎಂದು ಹಣಕಾಸಿನ ಸಚಿವರು ಪ್ರಜಾಸಭೆಯಲ್ಲಿ ಘೋಷಿಸಿದಾಗ

—ಸದಸ್ಯರೆಲ್ಲರೂ ಹೌದು! ಹೌದು!! ಆದರೆ ನಮಗೆ ಕೊಡುವ ಭತ್ಯದಲ್ಲಿ ಖರ್ಚು ತೂಗಿಸೋದು ಕಷ್ಟವಾದ ಕಾರಣ, ಇನ್ನೊಂದು ನೂರು ರೂಪಾಯಿ ಹೆಚ್ಚಿಸಬೇಕು ಎಂದು ಪ್ರಾರ್ಥಿಸಿದರಂತೆ.

*　　*　　*　　*

ಈಗೀಗ ಕಾಲೇಜಿನ ವಿದ್ಯಾರ್ಥಿಗಳು ಗಡ್ಡಬಿಡುವುದಕ್ಕೆ ಶುರುಮಾಡಿದ್ದಾರೆ.

[ಸುದ್ದಿ]

—ಒಬ್ಬರ ಹಾಗೇ ಇನ್ನೊಬ್ಬರು ಕಂಡರೆ ಪೋಲಿಸಿನವರಿಗೆ ಹಿಡಿಯಲು ಕಷ್ಟ ಅಲ್ಲವೇ!! ಹೆಣ್ಣುಮಕ್ಕಳು ಗುರ್ತಿಸುವುದೂ ಕಷ್ಟ ಅಲ್ಲವೇ!

*　　*　　*　　*

ಕಬ್ಬಿಣವನ್ನು ಕರಗಿಸುವಂತಹ ರಸವನ್ನು ಮಲೆನಾಡಿನ ಸೊಪ್ಪಿನಿಂದ ತೆಗೆಯಬಹುದೆಂದು ಸುದ್ದಿ ಬಂದಿದೆ.

—ಸರ್ಕಾರದ ಗೆಜೆಟ್ಟಿನಿಂದ ಹೊರಗಾದ ನೌಕರರು ಸೊಪ್ಪನ್ನು ತರಿಸಬೇಕೆಂದಿದ್ದಾರೆಂದೂ, ರಸ ಹಿಂಡಿ, ಅರ್ಥ ಸಚಿವರ ಹೃದಯಕ್ಕೆ ಲೇಪಿಸಬೇಕೆಂದಿದ್ದಾರೆಂಬುದೂ ಶುದ್ಧ ಸುಳ್ಳಂತೆ.

*　　*　　*　　*

ಇದು ಕೇಳಿದ್ದೀರಾ ?

ಸಂಗ್ರಾಮ ಶ್ರೀಮಂತನೊಬ್ಬನ ಮಗಳ ಮದುವೆಗೆ ಮಹಾ ಮಹೋಪಾಧ್ಯಾಯರನ್ನೇ ಕರೆಸಬೇಕು ಎಂದು ಶ್ರೀಮಂತಿಣಿ ಹಠಹಿಡಿದ ಕಾರಣ ವೇದಮೂರ್ತಿ ಭಟ್ಟಾಚಾರ್ಯರೇ, ದೇಹಲಿಯಿಂದ ರಾಜೀವಪುರಕ್ಕೆ ಬಂದಿದ್ದರು. ಶಾಸ್ತ್ರೋಕ್ತವಾಗಿ ವಿಧಿಪೂರ್ವಕ ಕನ್ಯಾದಾನವಾಯಿತು.

ಮುಹೂರ್ತಕ್ಕೆ ಊರ ಗಣ್ಯರೆಲ್ಲರೂ ಬಂದಿದ್ದರು. ಹೊರ ಊರಿನ ಶ್ರೀಮಂತರು ಹಲವರು ಬಂದಿದ್ದರು. ಪರ ಊರಿನ ಕೆಲವರು ಬಂದಿದ್ದರು ಎಲ್ಲರ ಕಣ್ಣಿಗೆ ಬೀಳುವಂತೆ ಪಾಶ್ಚಾತ್ಯದ ವ್ಯಾಪಾರಿಗಳೂ ಬಂದಿದ್ದರು. ಬಿಳಿಯರು, ಮೊದಲ ಪೀಠದಲ್ಲಿ ಸಹಜವಾಗಿ ಕುಳಿತಿದ್ದರು. ಹಿಂದೂಗಳ ಮದುವೆ ಮಂತ್ರಗಳನ್ನು ಅರ್ಥಮಾಡಿಕೊಳ್ಳಬೇಕೆಂಬ ಆಸೆ ಪಾಶ್ಚಾತ್ಯರಿಗೆ. ಪಕ್ಕದಲ್ಲಿದ್ದವರನ್ನು ಕೇಳಿ ಕೇಳಿ ತಿಳಿದುಕೊಳ್ಳುತ್ತಿದ್ದರು.

ಮಹಾ ಸಂಕಲ್ಪದ ಅರ್ಥ ತಿಳಿದುಕೊಂಡರು. ಆಮೇಲೆ ವಧೂವರರ ಪರಿಚಯವನ್ನು ಸಭೆಗೆ ಮಾಡಿಕೊಡುವ ಗೋತ್ರಗಳ ಘೋಷಣೆಯಾಯಿತು. ಕಂಚಿನಂತಹ ಗಂಟಲಲ್ಲಿ ಸುಮಧುರವಾಗಿ ಪಠಿಸಿದಾಗ ನಾದಸುಖದಲ್ಲಿ ಪಾಶ್ಚಾತ್ಯ ಅತಿಥಿಗಳು ಪ್ರಶ್ನೆ ಕೇಳಲು ಮರೆತರು.

ಸಭಾಪೂಜೆ ತಾಂಬೂಲ ಆದಮೇಲೆ ನವ್ಯ ಶ್ರೀಮಂತರಾದ ವಧುವಿನ ತಂದೆ, ಮ|| ಭಟ್ಟಾಚಾರ್ಯರನ್ನು ಬಿಳಿಯ ಅತಿಥಿಗಳಿಗೆ ಪರಿಚಯ ಮಾಡಿಕೊಟ್ಟಾಗ ಬಿಳಿಯರು "ಗೋತ್ರೋದ್ಭವಾಯ" ಏನೆಂದು ಕೇಳಿದರು. ಐದು ಇಂಥಿಂಥಾ ಋಷಿಗಳು ಮೂಲಪುರುಷರು ಅವರ ವಂಶದಲ್ಲಿ ವಧು ಹುಟ್ಟಿದ್ದು ; ಮೂರು ಇಂತಿಂಥಾ ಋಷಿಗಳ ವಂಶದಲ್ಲಿ ವರ ಹುಟ್ಟಿದ್ದು ವಧೂವರರ ವಂಶ ಪರಿಚಯ ಸಭೆಗೆ ಹಾಗೆ ಮಾಡಿಕೊಡುತ್ತೇವೆ" ಎಂದರು ಭಟ್ಟಾಚಾರ್ಯರು.

"ಅಂದರೆ ಒಬ್ಬಾತನ ವಂಶವಲ್ಲ ನಿಮ್ಮದು" ಎಂದು ಕೊಂಕು ನುಡಿದ, ಬಿಳಿಯ ಪಾಶ್ಚಾತ್ಯ.

"ಹಾದು" ಅಂದರು ಭಟ್ಟಾಚಾರ್ಯರು. ನಂತರ ವಿಶದೀಕರಿಸಿದರು.

"ನಮ್ಮಲ್ಲಿ ಒಂದು ಮೂರು, ಐದು ಹೀಗೆ ಋಷಿಗಳು ಗೋತ್ರ ಸೂಚಕರು ೨೦೦೦-೪೦೦೦ ವರ್ಷಗಳ ಹಿಂದಿನವರು, ಆದರೆ ತಾತ ತಂದೆಯವರು ಒಬ್ಬೊಬ್ಬರೇ. ನಿಮ್ಮಲ್ಲಿ ಕೂಟಸ್ಥಗೋತ್ರದವರು ಮರದ ಕೊಂಬೆಯ ಮೇಲಿದ್ದ ಒಬ್ಬನೇ ಆದರೂ ತಂದೆ ತಾತಂದಿರು ಒಂದು ಮೂರು, ಐದು ಹೀಗೆ ಇರುತ್ತಾರೆ. ಅಷ್ಟೇ ವ್ಯತ್ಯಾಸ" ಎಂದನು.

ರಂಗಜ್ಜಿಯ ಹೃದಯ ಬಲು ಮೆತು. ಅಯ್ಯೋ ಅಂತ ಯಾರಾದರೂ ಗೋಳಿಟ್ಟರೆ ಆಕೆಯ ಕರುಳೇ ಕುಯ್ದಂತಾಗುತ್ತಿತ್ತು.

ಸಂಜೆ ಗೋಪಾಳದವನು ಮನೆಯ ಹತ್ತಿರ ಬಂದು ಕೂಗಿದಾಗ ರಾತ್ರಿ ಹತ್ತು ಬಡಿದಿತ್ತು. ಎಲ್ಲರ ಊಟವೂ ಆಗಿ ಮುಗಿದಿತ್ತು. ಬೆಳಿಗ್ಗೆ ಬರುವ ಮುಸುರೆಯವಳಿಗೆ ಅಂತ ತಂಗಳು ತೆಗೆದಿಟ್ಟಿದ್ದಳು ರಂಗಜ್ಜಿ.

"ಅಮ್ಮಾ ತಾಯಿ! ಸಂಜೆ ಗವಳಾ ತಾಯಿ ಮೂರು ದಿನದಿಂದ ಹೊಟ್ಟೆಗೆ ಇಲ್ಲಮ್ಮಾ ಏನಾರಕೊಡಿ ತಾಯಿ" ಅಂತ ಗೋಪಾಳದವ ಕೂಗುತ್ತ ನಿಂತಿದ್ದ ಮನೆಯ ಹೊರಗೆ. ರಂಗಜ್ಜಿಗೆ ಬಲು ದುಃಖವಾಯ್ತು. ಕರುಳು ಕುಯ್ದ ಹಾಗೆ ಆಯ್ತು. ಅಡಿಗೆ ಮನೆಯಿಂದ ಹೊರಬಾಗಿಲಬಳಿಗೆ ಬಂದಳು. ಬಾಗಿಲು ತೆಗೆದಳು. ಗೋಪಾಳದವನನ್ನು ಆದರದಿಂದ

"ಮೂರು ದಿನದಿಂದ ಏನೂ ತಿಂದಿಲ್ಲ ಅಂತೀಯಲ್ಲಪ್ಪಾ! ಈಗ ತಂಗಳು ಕೊಟ್ಟರೆ ತಿನ್ನುಕ್ಕೆ ಆಗುತ್ತ್ಯೇಪ್ಪ ತಿಂದರೆ ನಿನ್ನ ಮೈಗೆ ಆಗುತ್ತ್ಯೇಪ್ಪ" ಎಂದು ಕೇಳಿದಳು ಸಂಜೆ ಗೋಪಾಳದವನಿಗೆ ಕನಿಕರದಮಾತು ಮಂಕು ಬಡಿಸಿತು.

"ಅ್ಹಾ! ಅ್ಹಾ!! ತಂಗಳು ಅಷ್ಟು ಒಂಟುಲ್ಲ" ಎಂದ "ಹಾಗಾದರೆ ನಾಳೆದಿವಸ ಬಾಪ್ಪ!" ಎಂದು ರಂಗಜ್ಜಿ ಹೇಳಿ ಬಾಗಿಲನ್ನು ಧಡಾರಂತ ಹಾಕಿಕೊಂಡು ನೊಂದ ಮನದಿಂದ ಅಡಿಗೆಮನೆ ಸಾರಿಸುಕ್ಕೆ ಹೋದಳು.

* * * * *

"ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳಬೇಕು. ಸಂಕಲ್ಪಮಾಡಿ ಸಂಯಮದಿಂದ ಸಿದ್ಧಿಪಡೆಯಬೇಕು. ಸೀಮಾಪುರುಷರಾಗಬೇಕು. ಆಗ ಧನ ಲಕ್ಷ್ಮಿಯು ನಮ್ಮ ಮನೆಯಲ್ಲಿ ತಾಂಡವವಾಡುತ್ತಾಳೆ. ಮನೆಯಮುಂದೆ ದಿನ ಬೆಳಗಾದರೆ ಪಂಚ ವಾದ್ಯಗಳು ಉದಯರಾಗ ಹಾಡುತ್ತವೆ. ಪಚ್ಚತೋರಣ ಬಾಗಿಲಿಗೆ ಕಟ್ಟಲ್ಪಡುತ್ತದೆ, ಎರಡು ಆನೆ ಏಳು ಪಂಚಕಲ್ಯಾಣಿ ಕುದುರೆಗಳು ಎಂಟು ಎಮ್ಮೆ ಮನೆಯಲ್ಲಿ ಕಟ್ಟಲ್ಪಡುತ್ತವೆ.

ಇದು ನಾವು ನಮಗೆ ತೀರಿಸಬೇಕಾದ ಋಣ"

ಎಂದು ಸಭೆಯಲ್ಲಿ ರಾಜಕಾರಣಿಯ ಪುಢಾರಿಯ ಬೊಬ್ಬೆಯಿತ್ತಿದ್ದ. ಸಭೆಯು ನಿಶ್ಶಬ್ದವಾಗಿತ್ತು. ಮಾತಿನ ಸರಣಿ ಮಾಟಮಾಡಿತ್ತು. ಹಿಂದಿನಿಂದ ಕಂಚು ಹೊಡೆದ ದನಿಯಲ್ಲಿ ಆಗ ಕೇಳಿಸಿತು.

"ಇಷ್ಟೆಲ್ಲಾ ಸಂಪಾದಿಸಿದರೆ ನೀವೆಲ್ಲಾ ಸರ್ಕಾರದಲ್ಲಿದ್ದರೆ ಸಂಪಾದಿಸಿದ್ದನ್ನೆಲ್ಲಾ ಋಣವಾಗಿ ನಿಮಗೇ ತೀರಿಸಬೇಕಾಗುತ್ತೆ–ಆಗ"– ಎಂದು.

ತಪ್ಪು ಮಾಡಿದೆವು

ರಕ್ಷಣಾ ಸಚಿವರು ಬೆಂಗಳೂರಿಗೆ ಬಂದಿದ್ದಾಗ, ಕಾರ್ಪೊರೇಷನ್ನಿನವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರಂತೆ. ಅಭಿನಂದನೆಮಾಡುತ್ತಾ ಮೊದಲ ಪ್ರಜೆಯು ಸೈನ್ಯದ ಅಧೀನದಲ್ಲಿರುವ ಸ್ವಲ್ಪ ಜಮೀನನ್ನು ಪುರಸಂಸ್ಥೆಗೆ ಕೊಡಬೇಕೆಂದು ಕೇಳಿಕೊಂಡರಂತೆ. ರಕ್ಷಣಾ ಸಚಿವರು ಸಿಪಾಯಿಗೆ ಸಹಜವಾದ ಹರಿತದ ಮಾತುಗಳಲ್ಲಿ "ಅಸಾಧ್ಯ-ಆಗೋದೇ ಇಲ್ಲ" ಎಂದು ಕಡ್ಡಿತುಂಡು ಮಾಡಿದಂತೆ ಹೇಳಿದರೆಂದು ನಮ್ಮ ವರದಿಗಾರರು ಹೇಳಿದ್ದಾರೆ.

ಇದು ನಿಜವಾಗಿದ್ದರೆ ನಾವು ತಪ್ಪುಮಾಡಿದೆವು. ಕೇಳಬಾರದಾಗಿತ್ತು. ಅದರ ಬದಲು ಸತ್ಕಾರಕೂಟವನ್ನು ಲಾಲ್‌ಬಾಗಿನ ಅಥವಾ ಕಬ್ಬನ್ ವನದ ಬಯಿಲಲ್ಲಿ ಏರ್ಪಡಿಸಬೇಕಾಗಿತ್ತು. ಅದೂ ಸಂಜೆ ೬-೬-೩೦ ಕ್ಕೆ ಒಂದು ಗಂಟೆ ಮನರಂಜನೆಯನ್ನಿಟ್ಟುಕೊಳ್ಳಬೇಕಾಗಿತ್ತು. ಆಗ........

ಜಟ್ ವಿಮಾನಗಳು ಅಂದರೆ ಜಟ್ಕಾಗಳಿಗಿಂತ ಹೆಚ್ಚು ಶಬ್ದಮಾಡುವ ವಿಮಾನಗಳಿಗಿಂತ ಹೆಚ್ಚು ಮೊರೆಯುತ್ತ ಬರುವ ಸೊಳ್ಳೆಗಳು ಸಾಮೂಹಿಕವಾಗಿ ರಕ್ಷಣಾ ಸಚಿವರನ್ನು ಮುತ್ತುತ್ತಿತ್ತು. ಕುಡಿಯಲು ಚಹಾ ಬಟ್ಟಲನ್ನು ಎತ್ತಿದರೆ ಮೂರು ಆರು ಸೊಳ್ಳೆ ಅತ್ತ ಇತ್ತ ಹಾರಾಡಿದ್ದರೆ, ಮೂಗು ಮುತ್ತಿ ಮುತ್ತಿಟ್ಟಿದ್ದರೆ, ಸೀನು ಸರಾಗವಾಗಿ ಬಂದಿದ್ದರೆ ರಕ್ಷಣಾ ಮಂತ್ರಿಗಳು ಮೆದುವಾಗಿರುತ್ತಿರಲಿಲ್ಲವೇ?

ಹಾರ್ಮೋನಿಯಮ್ಮಿನ ಕರಿ ಆರನೇ ಮನೆಗೆ ಶ್ರುತಿ ಗೂಡಿಸುತ್ತ ಬಂದ ಸೊಳ್ಳೆಗಳು ರಕ್ಷಣಾ ಸಚಿವರ ಕಿವಿ ಮುತ್ತಿ ಚುಚ್ಚಿದ್ದರೆ, ಚೀಣೀಯರ ಧ್ವನಿಗಿಂತ ಹೆಚ್ಚು ಬಾಧೆಯಾಗುತ್ತಿತ್ತು, ಅವರಿಗೆ. ಆಫ್ರಿಕಾದ ಬಿಳಿಯರ ಬಿರುನುಡಿಗಳಿಗಿಂತ ಹೆಚ್ಚು ತ್ರಾಸು ಅವರಿಗೆ ಕೊಡುತ್ತಿತ್ತು. ಆಗ ಅವರು ಕಿವಿ ಮುಚ್ಚಿಕೊಂಡು ಸುಸ್ತಾಗಿರುತ್ತಿತ್ತಿಲ್ಲವೇ?

ಸೊಳ್ಳೆಗಳ ಕಾಟ ತಪ್ಪಿಸಿಕೊಳ್ಳಲು ಕೈಗೋಲನ್ನು ಬಹುಮಾನಬಂದ ಗಂಧದ ನಡೆಗೋಲನ್ನು ಅತ್ತ ಇತ್ತ, ಕಾಲುಮೇಲೆ ಹೆಗ್ಗತ್ತಿನ ಹತ್ತಿರ ಬಿಡುವಿಲ್ಲದೆ ಆಡಿಸುವಂತಾಗಿದ್ದರೆ, ರಕ್ಷಣಾ ಸಚಿವರು ರಕ್ಷಣೆಯನ್ನು ಬೇಡುತ್ತಿರಲಿಲ್ಲವೇ?

ಅಂತಹ ರಸ ನಿಮಿಷದಲ್ಲಿ ಮುಹೂರ್ತನೋಡಿ

"ರಕ್ಷಣಾ ಸಚಿವರೇ! ಈ ಸೊಳ್ಳೆಗಳ ಕಾಟದಿಂದ ನಾವೂ ಕಂಗೆಟ್ಟಿದ್ದೇವೆ. ನಮ್ಮ ಮಹಿಳೆಯರು ಕೂಡ ಧ್ವನಿ ಎತ್ತಿದ್ದಾರೆ. ಈ ಎರಡೂ ಕಷ್ಟಗಳಿಂದ ನಾವು ಪಾರಾಗಬೇಕಾದರೆ, ಸೊಳ್ಳೆಗಳ ಸಂತಾನ ಕ್ಷೇತ್ರವಾದ ಕೆಲವು ಜಾಗಗಳನ್ನು ನಾವು ಬಂಜೆಯನ್ನಾಗಿ ಮಾಡಲೇಬೇಕು. ಅಂತಹ ಜಾಗಗಳು ನಿಮ್ಮ ಸೈನ್ಯದ ವಶದಲ್ಲಿವೆ ಅವನ್ನು ನಮಗೆ ವಹಿಸಿಕೊಟ್ಟು ಕಾಪಾಡಬೇಕು ಕೃಷ್ಣಾ!" ಅಂತ ದ್ರೌಪದಿಯ ತರಹ ಬೇಡಿಕೊಂಡಿದ್ದರೆ ನಮ್ಮ ಬೇಡಿಕೆ ಪೂರೈಸುತ್ತಿತ್ತು ಅಲ್ಲವೆ?

—ರಕ್ಷಣಾ-ಕುಮಾರ್

" ಉರ್ಲೌಕಿ "

ಬೆರಳನು ಚುಚ್ಚಿದೆ, ತಿರುಗಿಸಿದೆ
ಟ್ರನ್‌ಟ್ರನ್ ಶಬ್ದವು ಬರಲಿಲ್ಲ
ದುಂಬಿಯ ಮೊರೆತವೆ ಕೇಳಿಸಿತು

ಕಿರು ಬೆರಳಾಯಿತು ಹೆಬ್ಬೆರಳಾಯಿತು
ಉಂಗುರ ತೊಟ್ಟ ಬೆರಳೂ ಮುಗಿಯಿತು
ಸೀಸದ ಕಡ್ಡಿಯು-ಫಲವಿಲ್ಲ!

ಏನೇ ಮಾಡಲಿ ಹೇಗೇ ಮಾಡಲಿ
ನನ್ನಯ ನಂಬರ ತಿರುಗಿಸಿದಾಗ
ದುಂಬಿಯ ಮೊರೆತವೆ ಶಾಶ್ವತವು

ಹುಚ್ಚಾಗಿದ್ದೆ ಬೆಪ್ಪಾಗಿದ್ದೆ ಶಿವಲೀಲೆಯೋ ಏನೋ
ಬೆರಳಿಗೆ ಮುತ್ತನು ಕೊಟ್ಟು ಚುಚ್ಚಿದೆ
ಟ್ರನ್‌ಟ್ರನ್ ಶಬ್ದವು ಬರಲೇ ಇಲ್ಲ

ಬೇರೆ ನಂಬರ ತಿರುಗಿಸಿದಾಕ್ಷಣ
ಯಾರು ? ಎಲ್ಲಿ ? ನಾನೇ ಇಲ್ಲಿ !
ಕೋಕಿಲ ಕಂಠವೋ, ಗದರುವ ದನಿಯೋ,

ಮಕ್ಕಳ ಕೊರಲೋ ಸೊಕ್ಕಿನ ನುಡಿಯೋ
ಮಾರ್ನುಡಿ ಆಡುವುದು
ನನ್ನಯ ನಂಬರನೇನೇ ಮಾಡಲಿ

ಟ್ರನ್‌ಟ್ರನ್ ಶಬ್ದವೇ ಬರಲೊಲದು
ನಾನೇ ನನ್ನೊಡನಾಡಲು ಆಗದು
ನನ್ನಯ ಧ್ವನಿಯದು ನನಗೇ ಇಲ್ಲ

ಹಿಂದಿನ ಋಷಿಗಳು ಅಂದಿದ್ದರು ಸೈ
ತನ್ನನು ತಾನೇ ಅರಿಯಲು ಕಷ್ಟ
ಟೆಲಿಫೋನಿನ ಅನುಭವವಿಲ್ಲದೆ ಅವರು
ಸತ್ಯವನೆಂತು ಕಂಡರೊ ಕಾಣೆ !

ಬಚ್ಚಿ.

ಗಾಂಪರ ಗುಂಪು

''ಗಗನ ಸಖಿ''

ಪಕ್ಕದ ಮನೆಯ ರೇಡಿಯೋ ಒಮ್ಮೊಮ್ಮೆ ಕಿರುಚುವ ಕೆಟ್ಟ ಕೂಗೆ? ಎಂದು ಆಶ್ಚರ್ಯದಿಂದ ಪಕ್ಕಕ್ಕೆ ನೋಡಿದರು ಗಾಂಪರು. ಮರುಳ ಒಳಗೇ ಗಂಟಲಿಂದ ಆ ಧ್ವನಿ ಪ್ರಸಾರ ಮಾಡುತ್ತಿದ್ದ. ಯಾವುದೊ ದುಸ್ಸ್ವಪ್ನ ಅವನನ್ನು ಕಾಡಿತ್ತು. ಈ ಮಾನವ ನಿರ್ಮಿತ ಪಕ್ಷಿರಾಜನ ಜಠರದಲ್ಲಿ ಕೂತು ಹಾರುವುದು ಭಾರಿ ಅಪಾಯ ಎಂಬ ಹೆದರಿಕೆ ಅವನನ್ನು ಆವರಿಸಿತ್ತು. ಹೊಟ್ಟೆಯಲ್ಲಿನ ನಡುಕ ಕರುಳನ್ನು ತಿರುಚಿ, ಆ ತಿರುಚು ಎದೆಯನ್ನು ಒತ್ತಿ, ಆ ಎದೆಯಲ್ಲಾದ ನೋವಿನ ತರಂಗ ಗಂಟಲ ತನಕ ಸರಿದು ರೇಡಿಯೋ ಪ್ರಸಾರದಂತೆ ಶಬ್ಧಸಂಪತ್ತನ್ನು ಬಾಯಿಂದ ತೂರಿ ಬಿಟ್ಟಿದ್ದ ಮರುಳು ಶಿಷ್ಯ. ''Fasten your belts'' ಎಂದಳು ವಾಯು ಸಖಿ. ಮರುಳ ಎದ್ದುನಿಂತು "ಗುರುಗಳೇ ಹಾಗಂದರೆ ಬೆಲ್ಟನ್ನು ಭದ್ರವಾಗಿ ಬಿಗಿಯಿರಿ ಎಂದರ್ಥ"—ಎಂದು ಗದ್ಗದ ಧ್ವನಿಯಲ್ಲಿ ಕೂಗಿ ಹೇಳಿದ.

ಗಾಂಪರೊಡೆಯರು ಎದ್ದು ನಿಂತರು. ಅವರನ್ನು ಕಂಡ ಶಿಷ್ಯರೆಲ್ಲಾ ಎದ್ದು ನಿಂತರು. ಷರಾಯಿಗೆ ಬಿಗಿದ ತಮ್ಮ ಬೆಲ್ಟುಗಳನ್ನು ಮತ್ತಷ್ಟು ಬಿಗಿಯಾಗಿ ಬಿಗಿದು ಕೊಂಡರು. ಗಗನ ಸಖಿ (Air Hostess) ಈ ಮಂದಿ ಹಾಗೆ ನಿಂತದ್ದು ಕಂಡು ತಬ್ಬಿಬ್ಬಾದಳು.

"ದಯವಿಟ್ಟು ಕೂತ್ಕೊಳ್ಳಿ. ವಿಮಾನ ಹೊರಡುವ ಹೊತ್ತಾಯಿತು. ಬೆಲ್ಟು ಬಿಗಿದುಕೊಳ್ಳಿ" ಎಂದು ಕೋಮಲ ಕಂಠದಿಂದ ಇಂಗ್ಲೀಷಲ್ಲಿ ಬಿನ್ನವಿಸಿಕೊಂಡಳು.

"ನಮಗೆ ಗೊತ್ತು. ಅದೇ ನಾವು ಮಾಡುತ್ತಿರುವುದು ಕಾಣೊಲ್ಲವೇ? ನಾವೇನು ಏನೂ ತಿಳಿಯದ ಮಂಕರೆಂದು ತಿಳಿದಿರಾ" ಎಂದ ಮಡ್ಡಿ.

"ನಾವೇನು ಮಡ್ಡಿಗಳೆ?" ಎಂದ ಮಂಕ.

"ಮುಠ್ಠಾಳುಗಳೂಂತ ತಿಳಿದಳು ಈ ಹೆಣ್ಣು ಹಾರೋಪ್ಲೇನು ಕಂಡೆಕ್ಟ್ರೆಸ್" ಎಂದ ಮರುಳ.

"ಅಯ್ಯೋ ಮರುಳೇ" ಎಂದು ಆಕೆಗೇ ಅನ್ನುವಂತೆ ಅಂದರು ಗುರುಗಳು. ಕಡೆಗೆ ಆಕೆ ಬಂದು ಎಲ್ಲರನ್ನೂ ಕೂಡಿಸಿ ಕುರ್ಚಿಯ ಆಚೆ ಈಚೆ ಬದಿಗಿದ್ದ ಬೆಲ್ಟನ್ನು ಎಳೆದು "ಹಾಗೆ ಬಿಗಿದುಕೊಳ್ಳಿ" ಎಂದು ತೋರಿಸಿಕೊಟ್ಟಳು. "ಈ ಬೆಲ್ಟು ಅಂತ ಹೇಳಿದ್ದರೆ ನೊದಲೆ! ಬರೀ ಬೆಲ್ಟು ಅಂದರೆ ನಮ್ಮ ಬೆಲ್ಟುಗಳೇ ಅಂತ ಕಾಮನ್‌ಸೆನ್ಸ್

ಇರುವವರಿಗೆಲ್ಲಾ ಅರ್ಥವಾಗುತ್ತೆ" ಎಂದು ಮಂಕ ಕಳೆ ಇಲ್ಲದ ಕಣ್ಣಿಂದ ಕಿಟಕಿಯ ಹೊರಗೆ ನೋಡುತ್ತಾ ಹೇಳಿದ. ಮಿಕ್ಕವರು ಪಿಳಿಪಿಳಿ ಕಣ್ಣುಬಿಡುತ್ತಿದ್ದರು.

"No Smoking" ಎಂದು ಢಾಳವಾಗಿ ಪೈಲಟ್ ಇರುವ ಮೂಗಿನ ಬಳಿ ಹೋಗುವ ಬಾಗಿಲ ಮೇಲೆ ಬರೆದಿತ್ತು. ಕಿಟಕಿಯಲ್ಲಿ ನೋಡಿದ ಮಂಕನಿಗೆ ಏನೋ ಸಂದೇಹ ಬಂತು.

"ಗುರುಗಳೇ–ಅಲ್ಲಿ ನೋಡಿ ಹೊಗೆ ಬಿಡಬಾರದು ಅಂತ ಬರೆದಿದ್ದಾರೆ...."

"ಅದಕ್ಕೇನೊ ನಿನ್ನ ಅಭ್ಯಂತರಾ ?"

"ಇಲ್ಲಿ ನೋಡಿ–ಈ ಇಂಜಿನ್ನು ಹೊಗೆ ಬಿಡುತ್ತದೆ"–ಎಂದು ಇಂಜಿನ್ನು ಹೊರಡುವ ಮುನ್ನ ಉಗಳು ಮಾಮೂಲಿಯ ಹೊಗೆಯನ್ನೇ ಟೀಕಿಸಿದ. ಗುರುಗಳಿಗೂ ಇದು ತಪ್ಪು ಎಂದೆನ್ನಿಸಿತು. ಕಡೆಗೊಂದು ತೀರ್ಮಾನ ಹೇಳಿದರು. "ಈಗಿನಕಾಲವೇ ಹಾಗೆ ಮಂಕಾ–ಹೇಳೋದು ಪುರಾಣ ತಿನ್ನೋದು ಬದನೆಕಾಯಿ.... ಇಷ್ಟು ದಪ್ಪ ಹೊಗೆ ತಾನೇ ಬಿಡುತ್ತಾ ಇದೆ ನಮಗೆ ಪುರಾಣ ಹೇಳೋದು"

ಎಂದಾಗ ಎದುರು ಸೀಟಿನಲ್ಲಿ ಕುಳಿತ ಹೆಣ್ಣು ಹೆಂಗಸೊಬ್ಬಾಕೆ ಗಟ್ಟಿಯಾಗಿ ನಕ್ಕುಬಿಟ್ಟಳು. ಆಕೆ ಯಾಕೆ ನಕ್ಕಳೆಂದು ಈ ಗಾಂಪರಿಗೆ ಅರ್ಥವಾಗಿದ್ದರೆ ಗಾಂಪರೊಡೆಯರಾಗುತ್ತಿದ್ದರೆ?

ವಿಮಾನ ಮೇಲಕ್ಕೆ ಹಾರಲು ಮೈದಾನದ ಒಂದು ಅಂಚಿನತನಕ ನೆಲದ ಮೇಲೆ ವೇಗವಾಗಿ ಹೋಗತೊಡಗಿತು. ಗಾಂಪರೊಡೆಯರು ಪಂಚಾಕ್ಷರಿ ಜಪ ಮಾಡಲು ಕೋಟಿನ ಜೇಬಿನಿಂದ ಮಣಿಸರ ತೆಗೆದು ಹಿಡಿದರು. ಶಿಷ್ಯರೆಲ್ಲಾ ಗಾಬರಿಯ ಮುಖ ಮಾಡಿದರು.

ಗಗನಸಖಿ "ದಯವಿಟ್ಟು ಗಮನಿಸಿ ಇನ್ನು ಕೆಲವೇ ನಿಮಿಷಗಳಲ್ಲಿ ಹಾರುವವರಿದ್ದೇವೆ. ಸುಮಾರು ಎಂಟು ಸಾವಿರ ಅಡಿ ಎತ್ತರದಲ್ಲಿ ನಮ್ಮ ಪ್ರಯಾಣ ಸಾಗುತ್ತದೆ-ಉಪಹಾರ ಏರೋಪ್ಲೇನಿನಲ್ಲೇ ಬಡಿಸಲಾಗುತ್ತದೆ. ಎಲ್ಲರಿಗೂ ಸುಖ ಪ್ರಯಾಣ ಕೋರುತ್ತೇನೆ" ಎಂದು ಇಂಗ್ಲೀಷಿನಲ್ಲಿ ಅತಿ ವಿನಯದ ಗಂಟಲಲ್ಲಿ ಹೇಳಿದಳು.

"ಅದೇನು ಆಕೆ ಹೇಳಿದ್ದು ? ಸರಿಯಾಗಿ ಕೇಳಿಸಲೇ ಇಲ್ಲ" ಎಂದು ಮಡ್ಡಿ ಕಿವಿಯಲ್ಲಿ ಕಿರುಬೆರಳು ಇಟ್ಟು ಆಡಿಸಿಕೊಂಡ. ಮೊದಲೇ ಇವನಿಗೆ ಇಂಗ್ಲೀಷೆಂದರೆ ಅಷ್ಟಕ್ಕಷ್ಟೇ ಅಂಥಾದ್ದರಲ್ಲಿ ಈ ಗಾಬರಿ ಸಂದರ್ಭದಲ್ಲಿ ಅರ್ಥವಾಗುವುದುಂಟೆ? ಇವನ ಪ್ರಶ್ನೆಗೆ ಮರುಳ "ಮಡ್ಡಿ ಮುಂಡೇದೆ ನಿನ್ನನ್ನ ಇಂಗ್ಲೆಂಡಿನಲ್ಲಿ ಏಸುಕ್ರಿಸ್ತನೇ ಕಾಪಾಡಬೇಕು" ಎಂದು ಅಣಗಿಸಿದ. ಮಡ್ಡಿಗೂ ಮರುಳನಿಗೂ ಮೊದಲಿಂದ ಅಷ್ಟಕ್ಕಷ್ಟೆ. ಗುರುಗಳ ನೇವಿದ್ಯವಾದ ಕೂಡಲೆ ಮಡ್ಡಿ ಮೊದಲು ಅರ್ಧ ಕಾಯಿ ಚೂರು ಬಾಳೆಹಣ್ಣು ನುಂಗಿ ಪಂಚಾಮೃತದ ಬಟ್ಟಲನ್ನ ಅರ್ಧ ಬರಿದು ಮಾಡುತ್ತಿದ್ದ. ಇನ್ನರ್ಧ ಸ್ವಯಂ ಗುರುಗಳೇ ಗುಳುಂ ಅನ್ನಿಸುತ್ತಿದ್ದರು. ಈ ಕೋಪ ಮರುಳನಿಗೆ

ಮಠಕ್ಕೆ ಸೇರಿದಂದಿನಿಂದ ಇತ್ತು. ಅವಕಾಶ ಸಿಕ್ಕಾಗಲೆಲ್ಲ ಅವನನ್ನು ಕುಕ್ಕಿ ಕಾಡುತ್ತಿದ್ದ.

ವಿಮಾನ ಆಕಾಶ ಸೇರಲು ವೇಗವಾಗಿ ಚಲಿಸತೊಡಗಿತು ವೇಗ ನಿಮಿಷ ನಿಮಿಷಕ್ಕೆ ಹೆಚ್ಚಿದಂತೆ ಗುರುಶಿಷ್ಯರ ಉಸಿರು ಸಿಕ್ಕಿ ಮುಖದಲ್ಲಿ ಪ್ರೇತಕಳೆ ಮೂಡಿತ್ತು. ಒಂದು ಕ್ಷಣ ಮಡೆಯನಿಗೆ ಲಬಲಬನೆ ಬಾಯಿ ಬಡಿದುಕೊಂಡು ಬಿಡಲೆ ಎಂದೆನಿಸಿತು· ಬಿಟ್ಟ ಕಣ್ಣಿಂದ ಕಿಟಕಿಯಲ್ಲಿ ನೋಡು ನೋಡುತ್ತಿದ್ದಂತೆ ವಿಮಾನ ನೆಲ ಬಿಟ್ಟಿತು, ವಿಮಾನ ಮೈದಾನ ಮುಗಿಯುವ ಹೊತ್ತಿಗೆ ಗಿಡಮರಗಳೆಲ್ಲಾ ತಳದಲ್ಲಿ ಕಾಣತೊಡಗಿದವು. ನೆಲ ದೂರವಾಯಿತು ವಿಮಾನ ಆಕಾಶದಲ್ಲಿ ತೇಲಿ ಹೊರಟಿತ್ತು.

" ಯಪ್ಪೊ–ಅಯ್ಯೋ–ಪ್ಯಾರಾಚೂಟ ಎಲ್ಲಿ ಸತ್ತೆ " ಎಂದು ಕೂಗಿದ ಮರಳ.

" ಶ್ರೀರಾಮ ರಕ್ಷೆ-ಶಂಭುಲಿಂಗಾ " ಎಂದ ಮಡ್ಡಿ.

" ಬಾಗಿಲು ತೆಗೀರಿ ನಾನು ಹಾರಿ ನೆಲ ಸೇರ್ತೀನಿ " ಎಂದು ಬಾಲಾ ಆಡಿಸಿದ ಮಂಕ.

ಇಷ್ಟಕ್ಕೆಲ್ಲಾ ಕಾರಣ " ಏರ್‌ಪಾಕೆಟ್ " ಅಂದರೆ ಒಂದು ನಿರ್ದಿಷ್ಟ ಎತ್ತರ ಸೇರುವ ತನಕ ಆಕಾಶದಲ್ಲಿ ಕೆಲವು ಕಡೆ ಕಡಿಮೆ ಒತ್ತಡದ ಪ್ರದೇಶಗಳಿರುತ್ತವೆ. ಆ ಪ್ರದೇಶಕ್ಕೆ ವಿಮಾನ ಸೇರಿದ ಕೂಡಲೇ ಇಡೀ ವಿಮಾನ ಒಂದೇ ಸಲ ಕೆಳಗೆಬಿದ್ದಂತೆ ಆಗುತ್ತದೆ. ಹಾಗೆ ಆದಾಗ ಕರಳು ಬಾಯಿಗೆ ಬರುತ್ತದೆ ಬೆನ್ನು ತಣ್ಣಗಾಗುತ್ತದೆ. ಹೀಗಾದಾಗ ಕಪಿಗೆ ಚೇಳು ಕಡಿಸಿದಂತೆ ಆಗಿತ್ತು ಗಾಂಪರೊಡೆಯರಿಗೆ ಮತ್ತು ಶಿಷ್ಯ ಮಂಡಲಿಗೆ.

" ಅಮ್ಮಾ ತಾಯಿ–ಈಗ ನಾವು ಕೆಳಗೆ ಇಳೀಬೇಕಾದರೆ ಹೇಗೆ ? ನಮಗೆ ಕಂಕಳಿಗೆ ಚತ್ರಿ ಕಟ್ಟಿ ಬಾಗಿಲು ತೆಗೆದು ನೂಕಿಬಿಡಮ್ಮ ಇನ್ನೂ ನಮ್ಮ ಮಠದ ಹತ್ತಿರವೇ ಇರಬೇಕು ಬದುಕ್ಕೊತೀವಿ "

ಎಂದು ಕೈಮುಗಿದು ಕೇಳಿದರು ಗಾಂಪರೊಡೆಯರು. ಎದುರಿಗೆ ಕುಳಿತ ಹೆಂಗಸು " ಈಗ ಇಳಿದರೆ ಮಠ ಸೇರೋಲ್ಲ–ಪರಲೋಕ ಸೇರ್ತೀರ–ಏನೂ ಆಗೊಲ್ಲ ಗಾಬರಿ ಆಗಬೇಡಿ ಇದೇ ಮೊದ್ಲು ನೀವು ಪ್ರಯಾಣ ಮಾಡ್ತಿರೋದು ? "

" ಎಲ್ಲಿಗೆ ಪರಲೋಕದ ಕಡೆಗೆ ? " ಎಂದರು ಗುರುಗಳು. ಆ ಹೆಣಮಗಳು ನಗುತ್ತಾ " ಅಲ್ಲರೀ ಏರೋಪ್ಲೇನ್ ಪ್ರಯಾಣ ಇದೇ ಮೊದಲಾ ಅಂತ ಕೇಳಿದ್ದು " ಎಂದೆನ್ನುತ್ತಿದ್ದಂತೆ ಮತ್ತೊಂದು ಕಡಿಮೆ ಒತ್ತಡ ಪ್ರದೇಶವನ್ನು ಹೊಕ್ಕಿತು ಹಾರೋಪ್ಲೇನು. ಧುಡುಂ ಎಂದು ಕೆಳಗೆ ಎಸೆದಂತಾಯಿತು. " ಅಯ್ಯಯ್ಯೋ " " ಶಿವಶಿವಾ " " ಗುರುಗಳೇ ಸತ್ತೆ " " ಜನಸಂಖೆ ಕಡಿಮೆಮಾಡೋಕೆ ಸರ್ಕಾರ ಹೂಡಿರೋ ತಂತ್ರವೆ ಇದೂ ? " ಎಂಬಿವೇ ಮುಂತಾದ ಕೂಗುಗಳು ಏರೋಪ್ಲೇನನ್ನು ಆವರಿಸಿತು.

ಇತರ ಪ್ರಯಾಣಿಕರು ನಕ್ಕರು. ಗಗನಸಖಿ ಸಮಾಧಾನ ಹೇಳಿದಳು. ತಟ್ಟೆಯ ತುಂಬಾ ಚಾಕಲೇಟು-ಪೆಪ್ಪರಮೆಂಟು ತುಂಬಿ ಮುಂದೆ ಹಿಡಿದಳು. ಅದನ್ನು ನೋಡಿ ಗುರು ಗಾಂಪರಿಗೆ-ಶಿಷ್ಯರಿಗೆ ಕೊಂಚ ಸಮಾಧಾನವಾಯಿತು. ಮರುಳ ಮುಷ್ಟಿ ಹಿಡಿದು ಜೇಬಿಗೆ ಬಿಟ್ಟ. ಗಾಂಪರೊಡೆಯರು ಕಮಂಡಲ ತುಂಬಿಕೊಂಡರು.

ಈ ಹೊತ್ತಿಗೆ ವಿಮಾನ ಎಂಟು ಸಾವಿರ ಅಡಿಗಳ ಎತ್ತರ ಮುಟ್ಟಿದ್ದಿರಬೇಕು. ಬೊಂಬಾಯಿನ ದಿಕ್ಕಿಗೆ ಒಂದೇಸಮ ಹಾರತೊಡಗಿತು. ಕೆಳಗೆ ನೋಡಿದಾಗ ಬರೀ ನೆಲ ಮೇಲೆ ಆಕಾಶ-ಮಧ್ಯೆ ಅಲ್ಲೊಂದು ಇಲ್ಲೊಂದು ಮೋಡದ ರಾಶಿ ಸೋಮಾರಿಯಂತೆ ತೇಲಿಹೋಗುತ್ತಿತು.

ಮರುಳನಿಗೆ ಹೊಟ್ಟೆ ತೊಳಸಲಿಕ್ಕೆ ಪ್ರಾರಂಭವಾಯಿತು.

ಮಂಕನಿಗೆ ಕಿವಿ ನೋವು ಹತ್ತಿತು. ಮಡ್ಡಿಗೆ ಒಂದೇಸಮ ಶೀನುಗಳು ಬರತೊಡಗಿದವು. ಗುರುಗಳಿಗೇ ತಲೆಶೂಲೆ ಜೊತೆಗೆ ಹೊಟ್ಟೆಯಲ್ಲಿ ತಳಮಳ ಪ್ರಾರಂಭವಾಯಿತು.

ಗಾಂಪರೊಡೆಯರಿಗೆ ಮೊದಲೇ ವಾಯುಶೂಲೆ ಇತ್ತು-ಹೊಟ್ಟೆಯಲ್ಲಿ ಗಾಳಿ ತುಂಬಿಕೊಂಡು ಸಂಕಟ ಪಡಿಸುವ ಖಾಯಿಲೆ ಕ್ರಾನಿಕಾಗಿತ್ತು. ಅವರಿಗೆ ಮೇಲೆ ವಾಯುಮಾರ್ಗ ಅಂದರೆ ವಾಯುಶೂಲೆ ಮುಮ್ಮಡಿಸಿರಬೇಕು ಎಂದು ತರ್ಕಿಸಿದರು. ಎಲ್ಲರಿಗೂ ಏರ್‌ಸಿಕ್‌ನೆಸ್ ಆವರಿಸಿತು.

ಬಾಯಲ್ಲಿ ತುಂಬಿದ ವಾಂತಿ ಹೊರಬೀಳದಂತೆ ಎರಡು ತುಟಿಯನ್ನೂ ಜೋಡಿಸಿ ಹಿಡಿದು ಮಡೆಯ ಟಾಯಿಲೆಟ್ ಎಂಬ ಚಿಕ್ಕ ಬೋರ್ಡು ಅಂಟಿಸಿದ ಚಿಕ್ಕ ಕೋಣೆಗೆ ಹೋಗಿ ಬಾಗಿಲಿಕ್ಕಿಕೊಂಡ.

ಗಗನಸಖಿ ಎಲ್ಲರನ್ನೂ ಸಂತೈಸಿದಳು. ಎಲ್ಲರ ಕೈಗೂ ಒಂದೊಂದು ಕಾಗದದ ಚೀಲ ಕೊಟ್ಟು "ವಾಂತಿ ಆದರೆ ಬಾಯಿಗೆ ಹಿಡಿದುಕೊಳ್ಳಿ" ಎಂದಳು. ಎಂಥದೋ ಒಂದು ಬಿಳಿ ಗುಳಿಗೆ ಬಾಯಿಗೆ ಹಾಕಿ ನೀರು ಕುಡಿಸಿದಳು.

ಈ ಗಾಂಪರ ಗುಂಪೇ ಗಾಳಿ ಖಾಯಿಲೆಗೆ ಗುರಿ ಆದಾಗ-ಗಗನಸಖಿಗೆ ಮಾಮೂಲಿಯ ಉಪಹಾರ ಹಂಚಲೂ ತೋಚದಾಯಿತು. ಕಡೆಗೆ ಎಲ್ಲರಿಗೂ ಬೋಂಡ-ಕಾಫಿ-ಕಿತ್ತಲೆ ಹಣ್ಣು ಕೊಟ್ಟಳು. ಈ ತಿಂಡಿ ಬಂದಾಗ ಖಾಯಿಲೆ ಕೊಂಚ ಕಡಿಮೆ ಆದಂತೆ ಕಂಡಿತು.

ಮರುಳ ಯಾವಾಗಲೂ ನಿರ್ದಾಕ್ಷಿಣ್ಯವ್ಯಕ್ತಿ. "ಇನ್ನೊಂದು ತಟ್ಟೆ ತಿಂಡಿ ಕೊಡಮ್ಮ-ಏರ್‌ಹೊಸ್ಟೆಸ್ ಅಮ್ಮಾ"-ಎಂದು ಕೇಳಿ ತಿಂದ.

ಹೀಗೇ ಸಂಕಟದ ನಡುವೆ ಮೂರು ಘಂಟೆಗಳು ಕಳೆದಾಗ ಮತ್ತೆ "Fasten your belt" ಅಂದಳು ಆಕೆ.

ದೂರದಲ್ಲಿ ಕಂಡಿತ್ತು ಬೊಂಬಾಯಿ.

—ದಾಶರಥಿ ದೀಕ್ಷಿತ್

"...........ಅಲ್ಲೇ ಇದೆ"

"ಸುಬ್ರ್ರಾಮೂ–ವೆಂಕಟಪತಿ ಬಂದನೆ?"

"ಇಲ್ಲ ಚಿಕ್ಕಪ್ಪಾ, ವೆಂಕಟಪತಿ—ಕಿಟ್ಟಣ್ಣ ಜೊತೆ ಬರ್‍ತಾನೆ"

"ಕಿಟ್ಟಣ್ಣ ಯಾವಾಗ ಬರ್‍ತಾನೋ?"

"ವೆಂಕಟಪತಿ ಬಂದಾಗ"

"ವೆಂಕಟಪತಿ ಎಲ್ಲಿಗೆ ಹೋಗಿದಾನೆ?

"ಕಿಟ್ಟಣ್ಣನಿಗೆ ಮನೆ ತೋರ್‍ಸೋಕೆ"

"ಯಾಮನೆ? ಎಲ್ಲಿದೆ?"

"ರುದ್ರಮ್ಮನ ಹೊಸಾಮನೆ ಪಕ್ಕದಲ್ಲಿ ಖಾಲಿ ಆಗಿಲ್ಲವೆ? ಅದು"

"ರುದ್ರಮ್ಮನ ಹೊಸಾಮನೆ ಎಲ್ಲಿದೆಯೋ?"

"ಸೂರಪ್ಪನ ಮನೆ ಎದುರಿಗೆ"

"ಸೂರಪ್ಪನ ಮನೆ?"

"ರುದ್ರಮ್ಮನ ಮನೆ ಎದುರಿಗೆ!!!?

"ರಾಮ ರಾಮ–ಸೂರಪ್ಪನ್ನೇ ಕರ್‍ಕೊಂಡು ಬಾರೋ ಹೋಗ್ಲಿ"

"ರುದ್ರಮ್ಮನ ಮನೆ ತೋರ್‍ಸಿ ಚಿಕ್ಕಪ್ಪಾ ಕರ್‍ಕೊಂಡು ಬರ್‍ತೀನಿ"

"ಒಳ್ಳೇ ಹುಚ್ಚು–ಮದುವೆ ಸಮಾಚಾರವಾಯ್ತು"

"ಹೌದು ರಾಂ ಚಿಕ್ಕಪ್ಪಾ–ಅದೇ ಸಮಾಚಾರ ರುದ್ರಮ್ಮನ ಹುಚ್ಚೀ ಸೂರಪ್ಪನಿಗೆ ಮತ್ತೆ ವೆಂಕಟಪತಿಗೆ........ಹಿ ಹಿ........"

—ಮುನೀಶ್ವರ

ನವರಂಗ್!

ಪೋಲೀಸ್ ಇನ್ಸ್ಪೆಕ್ಟರ್ ಬೆಂಕಿಸಿಂಹರಿಗೆ ರಿಟೈರ್ ಆದರೂ ಅವರ ಮುಖದ ಮೇಲೆ ಪೋಲೀಸ್ ಕಳೆ ಹಿಂದಿನಂತೆಯೇ ಇತ್ತು. ನಿಮಿರಿಕೊಂಡಿರುತ್ತಿದ್ದ ಅವರ ಭುಜಗಳು ಸ್ವಲ್ಪವೂ ಕುಗ್ಗಿರಲಿಲ್ಲ. ಆದರೆ ಕುಗ್ಗಿದ್ದುದು ಅವರ ಕೋಟಿನ ಕಿಸೆಗಳು ಮಾತ್ರ! ಎಲಾ ರಿಟೈರ್ಡ್ ಅಧಿಕಾರಿಗಳಂತೆ ವಾಕಿಂಗ್ ಸ್ಟಿಕ್ ಹಿಡಿದು ಕೊಂಡು ಲಾಲ್ ಬಾಗ್‌ಗೆ ವಾಕಿಂಗ್ ಹೋಗುವ ಸುಯೋಗವೂ ಅವರ ಪಾಲಿಗೆ ಬರಲಿಲ್ಲ. ಅಧಿಕಾರದಲ್ಲಿದ್ದಾಗ ಅವರು ಕಳ್ಳಕಾಕರರನ್ನೂ, ಕೇಡಿಗಳನ್ನೂ ಹಿಡಿದು ಸುಸ್ತಾಗಿದ್ದರು. ರಿಟೈರ್ ಆದಮೇಲೂ ಅವರು ಆ ಕಸುಬನ್ನೇ ಮುಂದುವರಿಸ ಬೇಕಾಯಿತು!

ಅಧಿಕಾರ ಇದ್ದಾಗಲೇ ಮಗಳಿಗೆ ಮದುವೆಮಾಡಿ ಕೈಕೊಡವಿಕೊಳ್ಳಿ ಎಂದು ಅವರ ಹೆಂಡತಿ ಕಿವಿಯಲ್ಲಿ ಎಷ್ಟೋಸಲ ಊದಿದರೂ, ಅವರು ಮಾತ್ರ ತಡೆಯೇ! ತಾಳಿ ತಾಳಿಕಟ್ಟಿಸಿಕೊಳ್ಳುವವಳು ಮುಂದೆಯೂ ಸುಖವಾಗಿ ಬಾಳುತ್ತಾಳೆ! ಚೂಟಿಯಾದ ಗಂಡನ್ನು ಹುಡಿಕಿ ತರೋಣ, ಸರ್ಕಾರಿ ಕೆಲಸದಮಧ್ಯೆ ಸಾಧ್ಯವಿಲ್ಲ ಎಂದೇ ಸಮಾಧಾನ ಹೇಳುತ್ತಾ ಮುಂದಕ್ಕೆ ತಳ್ಳುತ್ತಲೇ ಬಂದರು. ಸಿಂಹರಿಗೆ ಈಗ ರಿಟೈರೂ ಆಯಿತು. ಮಗಳಿಗೆ ಇಂಟರ್‌ನ ಪಾಸೂ ಆಯ್ತು! ಸಂಗೀತದ ಪಾಠ ಸಾವೇರಿಯವರಿಗೂ ಬಂದಿದೆ ಕುದರೆಯಂತೆ ಬೆಳದಿದಾಳೆ! ಅದರ ಬಾಲ ದಂತೆಯೇ ಜಡೆ! ಅದರಂತೆಯೇ ನಡೆ!

ಸಿರಿವಂತರ ಮನೆಯ ಲವಲವಕೆಯ ಗಂಡೇ ನಮ್ಮ ವಿಮಲಾಬಾಯಿಯ ಬಾಯಿಗೆ ತುತ್ತು; ಮಲನಾಡಿನ ಕಡೆ ಒಂದು ನೂರು ಎಕ್ರೆ ಅಡಿಕೆ ತೋಟ ಇರುವ ಎಳೆ ಪ್ರಾಯದ, ಸುಮಾರು ಗಾತ್ರದ ಜಾಮಾತನನ್ನು ಸಂಪಾದಿಸದೆ ಇದ್ದ ಮೇಲೆ ನಿಮಗಿದ್ದ ಇನ್ಸ್ಪೆಕ್ಟರ್ ಗಿರಿಗೆ ಯಾವ ಹಿಲೇರಿಜಮು!—ಎಂದು ಮೂದಲಿಸುವಳು ಇನ್ಸ್ಪೆಕ್ಟರ ಮನೆಯಾಕೆ—ಅಕ್ಕರಯುವನಿಯಾಕೆ! ಸತ್ಕುಲ ಪ್ರಸೂತನೂ, ಸದ್ಗುಣ ಸಂಪನ್ನನೂ ಆಗಿ ಶ್ರೀಮನ್ ನಾರಾಯಣ ಸ್ವರೂಪನಾದ ವರ ಶ್ರೇಷ್ಠನು ಡೆಮಾಕ್ರಿಸಿಯಲ್ಲಿ ಬದುಕುವುದು ದುರ್ಲಭವಾದ್ದರಿಂದ ಕಮ್ಯೂನಿಸ್ಟ್ ವರ್ತಳ ಗಳಲ್ಲೇ ಗಂಡನ್ನು ಹುಡಿಕಿ ತರಬೇಕೆಂಬುದೇ ಇನ್ಸ್ಪೆಕ್ಟರ ಪ್ರಾಕ್ಟಿಕಲ್ ಮೈಂಡ್‌ನ್ನು ಕೊರೆಯುತ್ತಿದ್ದ ಅಂಶ!

ಅಂದಮೇಲೆ ವಿಮಲಾಬಾಯಿಯ ವಯಸ್ಸು, ಸುತ್ತಳತೆ ಇನ್ಸ್ಪೆಕ್ಟರನ್ನು ಹಾಯಾಗಿ ಕೂರಿಸಲಿಲ್ಲ! ಅವರು ಜಾತಕಗಳನ್ನು ಓಡಾಡಿಸಿದರು! ತಾವೂ

ಓಡಾಡಿದರು! ಕನ್ಯಾಕುಮಾರಿಯಿಂದ ಮ್ಯಾಕಮೋಹನ್ ರೇಖೆಯ ಆಚೆಗೂ ದೃಷ್ಟಿ ಹರಿಸಿದರು!

ರಾಯರ ಸಂಬಂಧೀಕರ ಮನೆಯಲ್ಲೇ ನಾಲ್ಕಾರು ಗಂಡುಗಳಿದ್ದರೂ ರಾಯರು ಒಂದನ್ನೂ ಒಪ್ಪಲಿಲ್ಲ ನಮ್ಮ ವಿಮಲಾಬಾಯಿಯ ಮುಂದೆ ಇವರ ಬಿ. ಎ. ಒಂದು ಬಲೂನು! ಶುದ್ಧ ಅಪ್ರಯೋಜಿಕರು ಎನ್ನುತ್ತಿದ್ದ ಹಾಗೇ ಕಾಶೀಪತಿರಾಯರಿಂದ ಒಂದು ಕಾಗದ ಬಂತು! ಕಾಶೀಪತಿರಾಯರ ಮಗ ಕನ್ನಡ ಎಂ.ಎ., ಫಸ್ಟ್‌ಕ್ಲಾಸು! 'ಸಾಹಿತ್ಯದಲ್ಲಿ ಚಂದ್ರ' ಎನ್ನುವ ವಿಷಯಕುರಿತು ಪ್ರಬಂಧ ಬರೆದು ಪಿ. ಹೆಚ್. ಡಿ. ಗಿಟ್ಟಿಸುತ್ತಾನಂತೆ! ನಮ್ಮ ವಿಮಲಾಬಾಯಿಯ ಹನಿಮೂನು ಅವರ ಪ್ರಬಂಧಕ್ಕೆ ಪ್ರೇರಕ ಅಲ್ಲವೆ ಅಂದರು ಇನ್ಸ್‌ಪೆಕ್ಟರ ಹೆಂಡತಿ ಬೆಳದಿಂಗಳಿನಲ್ಲಿ!

ಇನ್ಸ್‌ಪೆಕ್ಟರು ಅಳಿಯನನ್ನು ನೋಡಿದರು. ಮೆಲ್ಲಗೆ ಮಾತಾಡಿ ಜವಾಬು ಗ್ರಹಿಸಿದರು! ನಗಿಸಿ ಹಲ್ಲುನೋಡಿದರು! ಕೈಹಿಸುಕಿ ಹಣೆಯ ಗೆರೆ ಎಣಿಸಿದರು! ಕಾಶಿಪತಿರಾಯರ ಮಗ ರಾಮಚಂದ್ರನಿಗೆ, ಮಾರೀಚನಂತೆ ಸುಳಿದಿದ್ದ ಈ ಇನ್ಸ್‌ಪೆಕ್ಟರ್‌ರ ಪರೀಕ್ಷಾಕ್ರಮದ ಗುಟ್ಟೇ ಸಿಗಲಿಲ್ಲ! ಸಾಯಂಕಾಲ ಇನ್ಸ್‌ಪೆಕ್ಟರು ಅಳಿಯನನ್ನು ಕರೆದುಕೊಂಡು ಸುತ್ತಾಡಿಕೊಂಡುಬರಲು ಹೊರಟರು. ಅಳಿಯನೇ ಮಾವನಿಗೆ 'ಕೋಕೋ' ಕೊಡಿಸಿ ಹಣವನ್ನೂ ತೆತ್ತ! ಮರ್‍ಯಾದೆಗೂ ಇನ್ಸ್‌ಪೆಕ್ಟರು ಬಿಲ್ಲನ್ನು ಕೈಗೆ ತೆಗೆದುಕೊಳ್ಳಲಿಲ್ಲ. ವಾಪಸು ಮನೆಗೆ ಬರುವಾಗ ಅಳಿಯನಿಗೆ ಚಪ್ಪಲಿ ಬಲುತ್ರಾಸಕೊಟ್ಟಿತು! ಮೊಳೆ ಎದ್ದು ಹಿಮ್ಮಡಿಯನ್ನು ಚುಚ್ಚುತ್ತಿತ್ತು! ಹೆಣ್ಣುಕೊಡುವ ಮಾವನಿಗೆ ಅಳಿಯನಾಗಬೇಕಾದವನು ಈ ವಿಚಾರವನ್ನು ತನ್ನ ಬಾಯಿಂದಲೇ ಹೇಗೆ ಶ್ರುತಪಡಿಸುವುದು! ಹಾಗೂ ನಡು ರಸ್ತೆಯಲ್ಲಿ ಹಳೆ ಚಪ್ಪಲಿಗಳನ್ನು ಮಾವನ ಮುಂದೆ ಕೈಗೆ ತೆಗೆದುಕೊಳ್ಳುವುದು ಹೇಗೆ! ರಾಮಾ ಚಂದ್ರನಿಗೂ ರಾಕೆಟ್ಟು ಬಡಿಯಿತು! ಬಳ್ಳಾರಿಯ ಅಳಿಯ ಇಷ್ಟೊಂದು ಪೇಚಿಗೆ ಸಿಕ್ಕಿಕೊಂಡು ಕತಕ್ಕಳಿಮಾಡುತ್ತಾ ಬೀದಿಯಲ್ಲಿ ಬರುವಾಗ ಇನ್ಸ್‌ಪೆಕ್ಟರ್ ಬೆಂಕಿ ಸಿಂಹರು ಏನೆಂದರು ಗೊತ್ತೆ? "ಅಯ್ಯಾ ಶ್ರೀ ರಾಮಚಂದ್ರ, ನೀನು ಬಹಳ ಮರ್‍ಯಾದಸ್ತ! ಇಷ್ಟೊಂದು ತಾಳ್ಮೆ, ಸಂಯಮ, ವಿನಯಗಳಿಂದ ಕೂಡಿರುವ ನಿನ್ನಂಥವರ ಶ್ರೇಷ್ಠನಿಗೆ ನನ್ನ ಮಗಳು ವಿಮಲಾಬಾಯಿಯನ್ನು ಕೊಟ್ಟು ಮದುವೆ ಮಾಡಿದರೆ ಈ ಡೆಮಾಕ್ರಸಿಯಲ್ಲಿ ಹೆಂಡತಿಬಾಯಿಗೆ—ಮಣ್ಣು! ನಿನಗೇಕೆ ಹೆಂಡತಿ ಮಕ್ಕಳು. ಚಂದ್ರನ ಮೇಲೆ ಪದ್ಯಬರೆದು ಹುಮಾಯೂನ್ ಕಬೀರ್‌ಗೆ ಕಳಿಸಿ ಕೊಡು! ನಾನೇ ನಿನ್ನ ಚಪ್ಪಲಿಯ ಹಿಮ್ಮಡಿಯಲ್ಲಿ ಮೊಳೆ ಎಬ್ಬಿಸಿದ್ದು!"— ಎಂದು ಹೇಳುತ್ತಾ ಬೆಂಗಳೂರು ಬಸ್ಸು ಹತ್ತೇಬಿಟ್ಟರು. ಮಗನಿಂದಲೇ ಈ ಸಮಾಚಾರವನ್ನು ಕೇಳಿದ ಕಾಶಿಪತಿರಾಯರು ಕನ್ನಡದ ಎಂ.ಎ., ಬೇಡಕಣೋ ಎಂದು ಹೇಳುತ್ತಲೇ ಇದ್ದೆ ಎಂದರು!


ರಾಯರ ಹೆಂಡತಿಗೆ ಬಲು ಪ್ರಿಯವಾಗಿದ್ದ, ಸಕಲೇಶಪುರದ ಅಡಿಕೆ ಸಾಹುಕಾರ್ ರಂಗಪ್ಪನವರ ಮಗನೂ ಇನ್ಸ್‌ಪೆಕ್ಟರ ದೃಷ್ಟಿಗೆ ಬಿದ್ದ! ಸಾಹುಕಾರರು ಬೊಜ್ಜು ಬೆಳಸಿಕ್ಕೊಂಡು ಮಂಚದಮೇಲೆ ಉರುಳಾಡುತ್ತಿದ್ದರು. ಮಂಚದ ಕೆಳಗಡೆ ಬಣ್ಣಕಟ್ಟಿದ ಅಡಕೆ ತುಂಬಿದ ಚೀಲಗಳು—ಕಬ್ಬಿಣದ ಪೆಟ್ಟಿಗೆಯ ತುಂಬಾ ನೋಟಿನ ಕಂತೆಗಳು. ಒಂದು ಕಡೆ ಹೊಟ್ಟೆ ಉಬ್ಬರ! ಇನ್ನೊಂದು ಕಡೆ ಹಣದ ಉಬ್ಬರ! ಇವುಗಳ ಮಧ್ಯೆ ಬೆಳದ ಶ್ರೀಮಂತ ವರ ವಿರಾಜಿಸಿದ ಕತ್ತು ಸಮೇತ, ವಿಮಲಾಬಾಯಿಯ ಹಾರ ತನ್ನ ಕತ್ತಿಗೇ ಮಾಡಿಸಿದ್ದು ಎನ್ನುವಂತೆ! ಇನ್ಸ್‌ಪೆಕ್ಟರು ಕಾರ್ಮಿಕ ರಾಜ್ಯದ ಹಾಡನ್ನೇ ಹಾಡಿದರು. ಅಡಿಕೆ ತೋಟ ಶಾಶ್ವತವಲ್ಲಪ್ಪ ಭೂಶಾಸನಬರುತ್ತಪ್ಪ. ಕಾರ್ಮಿಕ ರಾಜ್ಯದಲ್ಲಿ ತಲೆಗಿಂತ ತೋಳಿಗೇ ಪಟ್ಟ ಅಲ್ಲವೆ! ಎಂದರು. ಮಲೆನಾಡಿನ ಅಳಿಯನ ಮುಖದಲ್ಲಿ ಶ್ರೀಮಂತ ಗಂಡಿನ ಕಿರುನಗೆ ಚಿಮ್ಮುತ್ತಿತ್ತು! ಊಟ ಉಪಚಾರ ಆದಮೇಲೆ ಬಸ್‌ಸ್ಟಾಂಡಿನಲ್ಲಿ ಮಾವ ಅಳಿಯ ಸುಂಕದ ಮಂತ್ರಿಯ ಹೊಸ ಕಟ್ಟಳೆಗಳನ್ನು ಟೀಕಿಸುತ್ತಿದ್ದರು. ಬಸ್ ಬಂತು. ಇನ್ಸ್‌ಪೆಕ್ಟರು ಅಳಿಯನನ್ನು ಕರೆದು ಗುಟ್ಟಾಗಿ ಬಸ್ ಚಾರ್ಜಿಗೆ ಮೂರು ರೂಪಾಯಿ ಸಾಲ ಕೊಟ್ಟರು, ಹೋಗಿ ಕಳಿಸುತ್ತೇನೆ ಎಂದರು! ಶ್ರೀಮಂತ ಅಳಿಯ ಖುಷಿಯಾಗಿ ಜೇಬಿನಿಂದ ಹತ್ತುರೂಪಾಯಿನ ಹೊಸಾ ಹೊಸ ನೋಟೊಂದನ್ನು ತೆಗೆದು ಹೆಣ್ಣು ಕೊಡಬೇಕೆಂದು ಬಂದಿರುವ ಮಾವನ ಕೈಲಿಟ್ಟ! ಬಸ್ಸು ಹೊರಡಲು ಸಿದ್ಧವಾಯಿತು. ಇನ್ಸ್‌ಪೆಕ್ಟರು ಅಳಿಯನನ್ನು ಹತ್ತಿರ ಕರೆದರು. ಪರ್ಸ್ ತೆಗೆದು ತಮ್ಮಲ್ಲಿದ್ದ ನೋಟಿನ ಕಂತೆಯನ್ನು ತೋರಿಸುತ್ತಾ—"ತೊಗೋ ನಿನ್ನ ಹತ್ತು ರೂಪಾಯಿ ನೋಟು, ನೀನು ಶುದ್ಧ ಮುಟ್ಠಾಳ! ನಿನ್ನಂತಹ ವಿಚಾರ ಶೂನ್ಯನಿಗಲ್ಲ ನನ್ನ ಮಗಳು ವಿಮಲಾಬಾಯಿಯ ಹಾರ! ಪ್ರಜಾಪ್ರಭುತ್ವದಲ್ಲಿ ನೀವು ಮುಂದೆ ಬದುಕಲಾರರಿ. ನೀವೆಲ್ಲಾ ಮಣ್ಣು ಮುಕ್ಕುತ್ತೀರಿ ಎಂದು ಹೇಳುತ್ತಿದ್ದ ಹಾಗೇ ಬಸ್ಸು ಓಡಿತು. ಬಸ್ಸಿನಲ್ಲಿದ್ದವರೆಲ್ಲಾ ಒಬ್ಬರಮುಖ ಒಬ್ಬರು ನೋಡಿಕೊಂಡರು! ಸಿರಿವಂತ ಅಳಿಯ ಸಪ್ಪೆಮುಖ ಹಾಕಿಕೊಂಡು ಮನೆಗೆ ಹೋದ ಅಡಿಕೆ ತೂಗಿಸಲಿಕ್ಕೆ! ಇನ್ಸ್‌ಪೆಕ್ಟರ ವರಾನ್ವೇಷಣೆ ಬರುಬರುತ್ತಾ ತುಂಬಾ ಬಿಗಡಾಯಿಸಿ ಕೊಂಡಿತು. ಬದುಕುವ ಕಳೆಯೇ ಇಲ್ಲ ಈ ಗಂಡುಗಳ ಮುಖಗಳಲ್ಲಿ ಎಂದು ಇನ್ಸ್‌ಪೆಕ್ಟರು ಯಾರುಬಂದರೂ ವದ್ದು ಕಳಿಸುತ್ತಿದ್ದರು! ಕಡೆಗೊಂದು ದಿನ ವಿಮಲಾ ಬಾಯಿಯ ಜಾತಕವೂ ಫಲಕೊಟ್ಟಿತು! ಇನ್ಸ್‌ಪೆಕ್ಟರ ಪರೀಕ್ಷಾ ಸೂತ್ರಫಲಿಸಿ ಅವಳ ಕೊರಳನ್ನು ಮಂಗಳಸೂತ್ರ ಬಳಿಸಿತು!

ಒಂದು ದಿವಸ ಇನ್ಸ್‌ಪೆಕ್ಟರು ಮಲ್ಲೇಶ್ವರದಿಂದ ಬಸವನಗುಡೀಗೆ ರಾಯರ ಹಳೇ ಸ್ನೇಹಿತರಾದ ದಫೇದಾರ್ ದೇರಣ್ಣನವರನ್ನು (ಅವರೂ ಈಗ ರಿಟೈರ್ ಸದ್ಯಕ್ಕೆ) ನೋಡಿಕೊಂಡು ಬರಲು ಹೋಗುತ್ತಿದ್ದರು. ಬಸ್ಸಿನ ಹಿಂದಿನ ಸೀಟಿನಲ್ಲಿ

ಸುಮಾರು ನಡುವಯಸ್ಸಿನ ಯುವಕನೊಬ್ಬ ಕಂಡಕ್ಟರ್‌ನೊಂದಿಗೆ ನಯಾಪೈಸಾ ಜಗಳ ಹೂಡಿದ್ದ! ಹುಡುಗ ಎಡವಿದ್ದರೂ ತನ್ನದೇ ಸರಿ ಎಂದು ಬಾಯಿಮಾಡಿ ಕಂಡಕ್ಟರ ಬಾಯಿಮುಚ್ಚಿಸಿದ್ದ! ಇನ್ಸ್‌ಪೆಕ್ಟರಿಗೆ ಸಹಜವಾದ ಕುತೂಹಲ ಕೆರಳಿ ಅವನ ಮನೆ ಮಠ, ಕುಲಗೋತ್ರ, ತಂದೆ ತಾಯಿ, ಕೆರಿಯರ್ರು, ಕ್ರಿಕೆಟ್ಟು, ಮನಿ, ಮೆಟ್ರೊಮನಿ ಮುಂತಾದ ವಿಚಾರಗಳನ್ನೆಲ್ಲಾ ಕೇಳಿ ಸೂಕ್ಷ್ಮವಾಗಿ ಗ್ರಹಿಸಿದರು! ಹುಡುಗ ಬಸ್ಸು ಇಳಿದ. ಇಳಿಯುತ್ತಿದ್ದ ಹಾಗೇ ಮೀಸೆಯನ್ನು ಕಿತ್ತು ಜೇಬಿನಲ್ಲಿಟ್ಟು ಕೊಂಡ. ಬಲಗಡೆ ಜೇಬಿನಿಂದ ಕೆಂಪು ಟೋಪಿ ತೆಗೆದು ತಲೆಗೇರಿಸಿ ಬಿಳಿ ಟೋಪಿ ಯನ್ನು ಮಡಿಚಿ ಬಲ ಜೇಬಿನಲ್ಲಿ ತುರಿಕಿ ಬೈಬೈ ಅಂದ! ಇನ್ಸ್‌ಪೆಕ್ಟರು ಡಂಗಾದರು. ಅಡ್ರೆಸ್ ಬರದುಕೊಡಯ್ಯ ಎಂದು ಇನ್ಸ್‌ಪೆಕ್ಟರು ಹುಡಗನಿಗೆ ಪೆನ್ ಕೊಟ್ಟರು! ಪೆನ್ನು ಹಿಂದಕ್ಕೆ ಬರಲಿಲ್ಲ. ಬರೆದುಕೊಟ್ಟ ಅಡ್ರಸ್ಸೂ ಸುಳ್ಳು ಅಡ್ರೆಸ್ಸು ಎಂಬುದು ಇನ್ಸ್‌ಪೆಕ್ಟರಿಗೆ ಆಮೇಲೆ ಗೊತ್ತಾಯಿತು. ಬೆಂಕಿಸಿಂಹರು ಬಿಡುತ್ತಾರೆಯೆ? ಹುಡುಗ ನನ್ನು ಬೇಟಿಮಾಡಿದರು. ಹುಡುಗನ ಹೆಸರು ನವರಂಗ್ ಎಂದೂ, ತಂದೆ ಪ್ರಸಿದ್ಧ ಗಯಾ ಶ್ರಾದ್ಧ ಪ್ರವೀಣರೆಂದೂ ಮನೆ ಗುಟ್ಟಳ್ಳಿಯಲ್ಲಿದೆಯೆಂದೂ, ಮನೆಯ ಹೆಸರು 'ಶಂಖತೀರ್ಥ' ಎಂದೂ ಇನ್ಸ್‌ಪೆಕ್ಟರು ಪತ್ತೆಹಚ್ಚಿದರು ಮಾರನೆ ದಿವಸ ನವರಂಗ್ ಮನೆಗೆ ಬರುವ ಹೊತ್ತಿಗೆ ಇನ್ಸ್‌ಪೆಕ್ಟರು ಗಯಾ ಪಂಡಿತರೊಂದಿಗೆ ಶುಭ ಸಮಾಚಾರ ಮಾತಾಡುತ್ತಿದ್ದರು! ಮಗ ಬರುತ್ತಲೂ ಪಂಡಿತರು ಹೇಳಿದರು 2 ವರ್ಷದ ಹಿಂದೆಯೇ ಹಳೇ ಸ್ಕೀಮಿನಲ್ಲಿ 8ನೇ ಸಲ ಇಂಟರ್ ನಪಾಸಾಯಿತು! ಸರ್ಕಾರದವರು ಈಗ ಇಂಟರ್‌ನ್ನೇ ತೆಗೆದು ಹಾಕಿದಾರಂತೆ! ರಾಜಕೀಯದಲ್ಲಿ ಕೆಲಸ ಮಾಡುತ್ತಿದ್ದಾನೆ. ಗದ್ದೆ ತೋಟ ಏನೂ ಇಲ್ಲ. ಗಾಂಧಿನಗರದಲ್ಲಿ ಮುವತ್ತುಸಾವಿರ ಕೊಟ್ಟು ಒಂದು ಸಣ್ಣ ಬಂಗಲೆ ತೆಗೆದಿದ್ದೇವೆ. ನಾನು ಕೆಮ್ಮಿನ ಮಾತ್ರೆ ಮಾರುತ್ತೇನೆ. ಅವನು ನಾವೇ ಸ್ವತಹ ಮಾಡಿದ ಕೇಶತೈಲ ಮಾರುತ್ತಾನೆ. ಮಲ್ಲೇಶ್ವರದಲ್ಲಿ ಬೆಳಗಿನ ಹೊತ್ತು ಕೂದಲು ಸೊಂಪಾಗಿ ಬೆಳೆಯುತ್ತೆಂದು ಹೇಳಿ ಮಾರುತ್ತಾನೆ! ಸಂಜೆ ಹೊತ್ತು ಬಸವನ ಗುಡಿಯಲ್ಲಿ ಅದೇ ತೈಲವನ್ನು ಕೂದಲು ನಿರ್ಮೂಲವಾಗುತ್ತೆ ಎಂದು ಹೇಳಿ ಮಾರುತ್ತಾನೆ! ಇದರ ಪರಿಣಾಮವಾಗಿ ಮಲ್ಲೇಶ್ವರದಲ್ಲಿ ಕೆಲವರಿಗೆ ಕೂದಲು ಉದುರುತ್ತಲೂ ಬಸವನ ಗುಡಿಯಲ್ಲಿ ಕೆಲವರಿಗೆ ಸೊಂಪಾಗಿ ಬೆಳೆಯು ತ್ತಲೂ ಇದೆ ಎಂದರು! ಇನ್ಸ್‌ಪೆಕ್ಟರು ಗಯಾಪಂಡಿತರಿಗೆ ಅಡ್ಡಬಿದ್ದು ಆಶೀರ್ವಾದ ಬೇಡಿದರು. ನವರಂಗ್, ಮುಂಬಾಗಲಿನಲ್ಲಿ ಬಿಟ್ಟಿದ್ದ ಇನ್ಸ್‌ಪೆಕ್ಟರ ಹೊಸಾ ಹೊಸ ಚಪ್ಪಲಿಗಳನ್ನು ಎತ್ತಿಕೊಂಡು ಬಚ್ಚಲು ಮನೆಗೆ ಸಾಗಿಸಿದ! ಯಾರದೊ ಸ್ಮಾರಕ ನಿಧಿಗೆ 2 ರೂ. ಚಂದಾ ವಸೂಲು ಮಾಡಿ ಇನ್ಸ್‌ಪೆಕ್ಟರಿಗೆ ರಸೀತಿ ಕೊಟ್ಟರು. ರಾಯ ರಿಗೆ ಉಗಳು ನುಂಗಲಾರದೆ ಕೆಮ್ಮು ಒತ್ತಿಕೊಂಡು ಬಂತು! ಗಯಾ ಪಂಡಿತರು ಕೆಮ್ಮಿನ ಮಾತ್ರೆಯ 2 ಪ್ಯಾಕೆಟ್ಟುಗಳನ್ನು ಇನ್ಸ್‌ಪೆಕ್ಟರಿಗೆ ಮಾರಿ ಒಂದು ರೂಪಾಯಿ ವಸೂಲ್ ಮಾಡಿದರು. ಇನ್ಸ್‌ಪೆಕ್ಟರು ನವರಂಗ್‌ನನ್ನು ಅಭಿಮಾನದಿಂದ ಅಪ್ಪಿ

ಕೊಂಡರು! "ನೀನೀಗ ಡೆಮಾಕ್ರಸಿಯಲ್ಲಿ ಬದುಕುವ ಮಾರ್ಗ ಕಂಡು ಹಿಡಿದು ಕೊಂಡಿರುವ ಹಿರೋ! ನವರಂಗ್-ಶತರಂಗ್ ಆಗಿ ಬದುಕು,-ತೊಡಿಸು ಮಲ್ಲಿಗೆಯ ಹಾರವನ್ನು ನನ್ನ ಏಕೈಕ ಪ್ರೇಮದ ಕುವರಿ ವಿಮಲಾಬಾಯಿಯ ಕೊರಳಿಗೆ-ನೀನೀಗ ಯೋಗ್ಯನಾದ ವರ–ನಾನು ಅರಿಸುತ್ತಿದ್ದ ಗಂಡು!' ಎಂದರು. ನವರಂಗ್ ಮೀಸೆ ಅಂಟಿಸಿಕೊಂಡು ಕೇಶತೈಲದ ಸೀಸೆಗಳೊಂದಿಗೆ ಕಬ್ಬನ್‌ಪಾರ್ಕಿಗೆ ನುಗ್ಗಿದ! ಗಯಾ ಪಂಡಿತರಿಗೆ ಪಲನಾಡು ರಾಜಮನತನದವರಿಂದ ಹಿರಿಯರಾಜನ ವಾರ್ಷಿಕ ಶ್ರಾದ್ಧಕ್ಕೆ ಬೇಕಾಗುವ ಮೂರುಸಾವಿರ ಉದ್ದಿನವಡೆಗಳನ್ನು ಸರಬರಾಜು ಮಾಡಲು ಟೆಂಡರ್ ಕೊಡಬಹುದೆಂದು ಫೋ಼ನ್ ಕಾಲ್ ಬಂತು!

ಹಾ. ರಾ.



ಆ ಸ್ಪಿನ್ ಬೋಲರ್ನ ಫಾಸ್ಟ್ ಬೋಲರ್ ಅಂತ ತಿಳಕೊಂಡು ಔಟ್ ಅಗ್ಬಿಟ್ಟ ಕಣೋ"

ಮಾತಿನ ಮಾಲಕ್ಷಮ್ಮ


" ಗೌರಮ್ಮನೋರೇ! ಗೌರಮ್ಮನೋರೆ! ಒಳಗಿದ್ದೀರಾ ಓ! ಅಡಿಗೆ ಮನೇಲೇ ಇದೀರಲ್ರೀ! ಇದೇನ್ರೀ ಈರುಳ್ಳಿ ಹುಳಿ ಮಾಡ್ತಿರೋ ಹಾಗೆ ಕಾಣಿಸುತ್ತೆ! ಆವತ್ತು ಅಂದ್ರಿ ಈರುಳ್ಳಿ ಸೇರುಲ್ಲ ಅಂತ; ಓಹೋ ಯಜಮಾನರಿಗೆ ಇಷ್ಟ ಅಂತ ಮಾಡ್ತಾ ಇದೀರಾ! ಮಕ್ಕಳೆಲ್ಲಾ ತಿಂತಾರಲ್ವೇ! ತೌರುಮನೇಲಿ ವೈದಿಕರ ವಾಡಿಕೆ ಅಂತ ನಿಮಗೆ ಅಭ್ಯಾಸ ಇಲ್ಲದೆ ಇದ್ದರೆ ಬಿಡ್ತು. ಇಲ್ಲಾರೂ ಅಭ್ಯಾಸ ಮಾಡಕೋಬೋದಲ್ಲ! ಸ್ವಲ್ಪ ಇಂಗು ಮುಂದೆ ಮಾಡಿದರೆ ಬಲುರುಚಿ ಅಂದ್ರೇ!

ಅಂದ ಹಾಗೆ ಕೇಳಿದಿರಾ ಗೌರಮ್ಮನೋರೆ! ಆಚೆಬೀದಿ ಹಳ್ಳದ ಮನೆ ಗುಂಡಮ್ಮ! ಗುಂಡಮ್ಮನೋರು ಗೊತ್ತಿಲ್ಲ ಅಂತೀರಲ್ಲಾ! ಚೆನ್ನಾಯ್ತು!! ಮೊನ್ನೆ ದಾಸರು ' ಗಿರಿಜಾ ಕಲ್ಯಾಣ ' ಮಾಡಿ ಮುಗಿಸಿದಾಗ, ಮಂಗಳಾರತಿ ಹೊತ್ತಿಗೆ ನಾನೇ ಮಂಗಳ ಹಾಡ್ತೀನಿ ಅಂತ ಬಂದು ಹಾಡ್ತಾ ಹಾಡ್ತಾ ಆಕಳಿಸಿ ಎಲ್ಲರೂ ನಗೋ ಹಾಗೆ ಮಾಡ್ತಲ್ಲ; ಮೋಟುದ್ದ ಜಡೆಯ ಸಿಡುಬಿನ ಕಲೆ ಕಲ್ಯಾಣಿ ಅವರಮ್ಮ ಗುಂಡಮ್ಮ ನೋರ್ರೀ! ಈಗ ಗೊತ್ತಾಯ್ತಾ!! ಆ ಹುಡುಗಿ ದೊಡ್ಡೋಳಾದ್ರಂತೀ! ಇನ್ನೂ ಮದಿವೇನೆ ಮಾಡಿಲ್ಲ್ರೀ! ವೈದೀಕರ ಮನೇಲೆ ಹೀಗಾದರೆ ಇನ್ನೇನು ಗತೀಮ್ಮಾ!

ಏನಂದಿರಿ ಮಕ್ಕಳೆಲ್ಲಿ ಹೋಗಿದ್ದಾರೇಂದ್ರ? ಕಕ್ಕನ ಮಗ ಬಂದಿದ್ದಾನ್ರೀ ಅವ ಮಕ್ಕಳನ್ನೆಲ್ಲಾ ಅದೇನೋ ಮಾನ್ರಿಂಗ್ ಷೂ ಅಂತೆ ಅದಕ್ಕೆ ಕರಕೊಂಡು ಹೋಗಿ ದ್ದಾನೆ, ಶನಿವಾರ ಅಲ್ವೇ! ಇದೇನ್ರೀ! ಹನ್ನೊಂದು ಬಡೀತು ನಿಮ್ಮನೆ ಗಡಿಯಾರ! ರಸ್ತೇಲಿ ಕೂಗ್ತಾ ಇದಾನಲ್ಲಾ ಯಾರೋ! ಬೆಂಡೇಕಾಯಿ ಮಾರೋನಿದ್ದ ಹಾಗೆ ಕಾಣುತ್ತೇರಿ. ನಮ್ಮನೇಲೂನು ಇವತ್ತು ದಿವನಾದ ಬೆಂಡೇಕಾಯಿ ಗೊಜ್ಜು ಮಾಡಿ ದೇರ್ರಿ! ಊಟಕ್ಕೆ ಕೂತಾಗ ಯಜಮಾನ್ರು ಬಲು ಚೆನ್ನಾಗಿದೆ ಅಂದ್ರು, ಎರಡು ಮಿಳ್ಳೆ ತುಪ್ಪ ಇದ್ದರೆ ಇನ್ನೂ ಚೆನ್ನಾಗಿತ್ತು ಅಂದ್ರು. ತಿಂಗಳ ಕೊನೆ ನೋಡಿ, ತುಪ್ಪ ಮುಗಿದ್ಹೋಗಿತ್ತು ಎದರು ಮನೇಗೆ ಹೋಗಿ ಎರಡು ಮಿಳ್ಳೆ ತುಪ್ಪ ತರ್ತೀನಿ ಕೂತಿರಿ ಅಂದ್ರೆ ಅಂತ ಎಲೇ ಮುಂದೆ ಅವರ್ನ ಕೂರಿಸಿ ಬಂದೆ ಕಣ್ರೀ! ಕಚೇರಿಗೆ ಅವರ ಆಫೀಸರು ಬೇಗ ಬರ್ತಾರೆ ಬೇಗ ಹೋಗ್ಬೇಕು ಅಂತ ಹತ್ತು ಗಂಟೆಗೆ ಊಟಕ್ಕೆ ಕೂತರ್ರೀ! ಮರತೇ ಹೋಗುತ್ತೀರಿ ನಿಮ್ಮ ಹತ್ತಿರ ಮಾತಾಡ್ತಾ ಇದ್ದರೆ, ಅಷ್ಟು ಚೆನ್ನಾಗಿ ಮಾತಾಡ್ತೀರ್ರೀ ನೀವು, ಎರಡು ಮಿಳ್ಳೆ ತುಪ್ಪ ಸಾಲ ಕೊಟ್ಟಿರ್ರೀ.

ತಿಂಗಳಾಗುತ್ತಲೂ ತಂದು ವಾಪಸು ಕೊಡ್ತೀನಿ. ಅಂದ ಹಾಗೆ ಮಧ್ಯಾಹ್ನ ಬಿಡು ಮಾಡಿಕೊಂಡು ಒಂದೆರಡು ನಿಮಿಷ ನಮ್ಮನೆಗೂ ಬನ್ನಿ ಅಂದ್ರೆ–ಹೊತ್ತಾಯ್ತು ಈಗ ಕಾದಿರ್ತಾರೆ ಹೋಗಿಬರ್ತೀನಿ" ಎಂದು ಬೇಗ ಬೇಗ ಮಾರಿಗೊಂದು ಹೆಜ್ಜೆ ಹಾಕುತ್ತ, ಬಲಗೈಲಿ ತುಪ್ಪ ತುಂಬಿದ ಸೌಟನ್ನು ಹಿಡಿದುಕೊಂಡು, ಎಡಗೈಯಲ್ಲಿ ಮೊಣ ಕಾಲ ಹತ್ತಿರ ಸೀರೆ ಹಿಡಿದುಕೊಂಡು, ಪಂದ್ಯ ಓಡೋ ಕಾಲೇಜು ಹುಡುಗೀರ ತರಹ ಮಾತಿನ ಮಾಲಕ್ಷಮ್ಮನೋರು ಗಂಡನಿಗೆ, ಬೆಂಡೆಕಾಯಿಗೊಜ್ಜನ್ನಕ್ಕೆ ತುಪ್ಪ ಬಡಿಸಲು ಓಡಿದರು.

ಮು. ಸು. ಸು.



"ಅದ್ಕ ಅತ್ತಗೆ ಸರ್ಕ್ಕೋ ಲೇ ತಂಪು ! ಗಾಡಿ ಹೊಡೀ ಬ್ಯಾಕು"

ಕೊರವೇಶ್ವರನ ವಚನಗಳು

ಚೀಣದ ಕುರಿತು

‘ ಭಾಯಿ ಭಾಯಿ ’ ಎಂದು ಜಪಿಸಿದ ಜನಜಂಗುಳಗಳಿರಾ ನೀವು ಕಾಣಿರೆ ನೀವು ಕಾಣಿರೆ? ಇಂಡ್ಯಾ ಚೈನಾ ಫ್ರೆಂಡ್‌ಶಿಪ್ ಲೀಗಿನವರೇ ನೀವು ಕಾಣಿರೆ ನೀವು ಕಾಣಿರೆ? ಬಾಂಡುಂಗ್ ಭರಾಟೆಯ ಮಂದಿಗಳೆ ನೀವು ಕಾಣಿರೆ ನೀವು ಕಾಣಿರೆ? ಸುತ್ತಿಗೆ ಕುಡುಗೋಲಿನ ಮಾನಸ ಪುತ್ರರಿರಾ ನೀವು ಕಾಣಿರೇ ನೀವು ಕಾಣಿರೆ? ಪಂಚ ಶೀಲ ಸಹ ಜೀವನಗಳು ಎತ್ತ ಹೋದವೆಂದು ಕೊಂಚ ಹೇಳಿರಿ ಎಂದು ಅರಸುತ್ತ ಬಂದ ನಮ್ಮ ಕೊರವೇಶ್ವರ.

ಹಿಮಾಲಯದ ಕಣಿವೆಗಳಲ್ಲೆಲ್ಲ ನೀವೆ. ನೇಪದಂಚಿನಲೂ ನೀವೆ. ಲಡಖಿ ನೊಳಗೂ ನೀವೆ. ಎತ್ತ ನೋಡಿದರೂ ಚೀನೀ ಬಾಯಿಗಳೇ ಕಣ್ಣಿಗೆ ಬೀಳೆ ಎಲ ಎಲಾ ಏನು ಚೋದ್ಯವೆಂದು ಬೊಟ್ಟು ಕಚ್ಚುವ ನಮ್ಮ ಕೊರವೇಶ್ವರ.

ನೆಹರು ಮುಂದೆ ಮಾಯೆ ಮೆನನ್ ಎಂಬ ಅಭಿಮಾನವಾಗಿ ಕಾಡಿತ್ತು ನೋಡ! ಮೆನನ್ ಮುಂದೆ ಮಾಯೆ ಚೌ ಎಂಬ ಅಭಿಮಾನವಾಗಿ ಕಾಡಿತ್ತು ನೋಡ! ಪಂಚಶೀಲವೆಂಬ ಮಾಯೆಗೆ ಆಕ್ರಮಣ ಭಯ ಮರುಳೆನಿಸಿತ್ತು ನೋಡ! ಆದರೆ ವಿಸ್ತರಣೆಗಿಳಿದ ರುಸ್ತುಮಗೆ ಮರುಳಿಲ್ಲ ಮಾಯೆಯಿಲ್ಲ, ಅಭಿಮಾನವಿಲ್ಲ ಮನಃ ಸಾಕ್ಷಿಯೂ ಇಲ್ಲವೆಂದು ಸಾರುವ ನಮ್ಮ ಕೊರವೇಶ್ವರ.

ಗಡಿ ಭದ್ರತೆಗೆ ನೆಳಲಾಗಿ ಕಾಡಿತ್ತು ಮಾಯೆ ರಕ್ಷಣಾ ವ್ಯವಸ್ಥೆಗೆ ನೆಳಲಾಗಿ ಕಾಡಿತ್ತು ಮಾಯೆ. ರಾಷ್ಟ್ರ ರಾಷ್ಟ್ರಕ್ಕೇ. ಮಂಕು ಹಿಡಿಸಿ ಕಾಡಿತ್ತು ಮಾಯೆ. ಚೌಮಾವೊಗಳೆ! ನೀವುಗಳೊಡಿದ ಮಾಯೆಯನಾದರೂ ಗೆಲಲಾರರೆಂದ ಮೂಗಿಗೆ ಬೆರಳಿಡುವ ನಮ್ಮ ಕೊರವೇಶ್ವರ.

ನೆಚ್ಚಿದವರ ನಾಡಿನಲಿ ರಸ್ತೆಯ ರಚಿಸಿ ನೋಡಿದಿರಿ ನೀವು. ಹೆಜ್ಜೆ ಹೆಜ್ಜೆಗೂ ಮುಂದುವರೆದು ನೋಡಿದಿರಿ ನೀವು. ಅಲ್ಲಲ್ಲಿ ಠಾಣೆಗಳ ಕಟ್ಟಿ ನೋಡಿದಿರಿ ನೀವು. ನಮ್ಮ ಕಾವಲು ಪಡೆಗಳ ಗೋಣು ಮುರಿದು ನೋಡಿದಿರಿ ನೀವು. ಅಲ್ಲಾಡಿಸಿ ನೋಡಿ ಎಚ್ಚರಗದವರ ಕಂಡು ನಿಮ್ಮ ಅಂಜಿಕೆಯಳಿಯಿತಯ್ಯ ಎಂಬ ನಮ್ಮ ಕೊರವೇಶ್ವರ.

ನಾವೊಂದ ನೆನೆದರೆ ದೈವ ತಾನೊಂದು ನೆನೆವುದು. ನಾವು ಇತ್ತ ತಿಳಿದರೆ ದೈವ ಅತ್ತ ತಿಳಿವುದು. ಮೂಡಲಿಗೆ ಸ್ನೇಹ ಹಸ್ತ ಚಾಚಿದರೆ ಮೂಡಲಿನ ಕೈ ಬೆನ್ನಿಗಿರಿಯ ಬಂತಯ್ಯ. ಪಡುಮಗೆ ಬೆನ್ನು ಹಾಕಿ ನಿಂತರೂ ಪಡುವಲ ಕೈ ಬೆನ್ನ ಸವರುವಂತಿದೆಯಯ್ಯ ಎಂಬ ನಮ್ಮ ಕೊರವೇಶ್ವರ.

ಆನೆ ಅಂಕುಶಕ್ಕಲ್ಲದೆ ಅಂಜುವುದೇ ಅಯ್ಯ? ಮಾಣದೆ ಹುಲಿ ಕೋವಿಯಿಂದಂಜುವುದಲ್ಲದೆ? ಯೂನೋಗೆ ಡೋಂಟ್ ನೋ ಮಾಡಿದವರು ಸಾಮುಕ್ಕೆ ಕಿವಿಗೊಡರಯ್ಯ ಎಂಬ ಡಲ್ಲೇಶವಾಣಿ ಎತ್ತಲೋ ಮೊಳಗುತಿಹುದು ಕೇಳಿ ಬೆರಗಾದ ನಮ್ಮ ಕೊರವೇಶ್ವರ.

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದೊಡೆಂತಯ್ಯ. ಹೆಬ್ಬಾವಿನೊಡನೆ ಮೈತ್ರಿ ಬೆಳೆಸಿ ಅದು ಬಾಯಿ ತೆರೆದಾಗ ಗಾಬರಿ ಗೊಂಡರೆಂತಯ್ಯ. ಕಾಕಪೋಕರ ತಂಡಕ್ಕೆ ಜಗದ ಮನ್ನಣೆಯನೊದಗಿಸಲು ನಿರಂತರ ಪ್ರಯತ್ನಿಸಿದ ಬಳಿಕ ಅವರೇ ನಮ್ಮ ಸದೆಬಡಿಯ ಬಂದರೆಂದು ಬೆದರಿದೊಡೆಂತಯ್ಯ, ಸಹಜೀವನದ ಮಿತ್ರರೇ ಕೇಳಿರಯ್ಯ-ಸುತ್ತಿ ಬಂದಾಗ ಉಬ್ಬಿದಂತೆ ಬೆನ್ನಿಗಿರಿದಾಗಲೂ ಕಾಮಾಗಿ ಕೂಲಾಗಿ ಮುನ್ನಡೆಯ ಬೇಕೆಂಬ ಗುಟ್ಟನರುಹುವ ನಮ್ಮ ಕೊರವೇಶ್ವರ.

ನಮ್ಮ ಜಾಗವ ಸೂಜಿ ಮೊನೆಯಷ್ಟು ಬಿಟ್ಟು ಕೊಡವೆಂದು ಅಬ್ಬರಿಸಿದ ಮಾತ್ರಕ್ಕೆ ಆಕ್ರಮಣ ನಿಲ್ಲಿಸುವನೇ ಚೌ? ಆಕ್ರಮಣವನೆಂದೂ ಸಹಿಸವೆಂದು ಅಬ್ಬರಿಸಿದ ಮಾತ್ರಕ್ಕೆ ಅಂಜುವನೇ ಮಾವೋ? ನಿಮ್ಮ ವರ್ತನೆ ಅಕ್ಷಮವೆಂದು ನೂರು ಬಾರಿ ಖಂಡಿಸಿದ ಮಾತ್ರಕೆ ಕೂದಲುರುವುದೇ ತುಕರ್ಮಿಗಳದು? ಬಾಂಬರು ರಾಕೇಟುಗಳಲ್ಲದೆ ಬರಿಯ ಬೆದರಿಕೆಗಳು ಸಲ್ಲವಯ್ಯ ಎಂದು ಡಲ್ಲೇಶವಾಣಿ ಮತ್ತೆ ಮೊಳಗುವುದು ಕೇಳ್ದ ನಮ್ಮ ಕೊರವೇಶ್ವರ.

ಉಳ್ಳವರ ಅಣುಬಾಂಬು ರಾಕೇಟುಗಳ ಕಾವಲಿಟ್ಟು ಬೆದರಿಸುವರಯ್ಯ ನಾವೇನು ಮಾಡೇವು? ನಮಗೆ ಭಾಷಣಗಳೆ ಬಾಂಬುಗಳು. ಘೋಷಣೆಗಳೇ ರಾಕೇಟುಗಳು ರಿಸೊಲೂಶನ್‌ಗಳೇ ಬಹು ಭೀಕರಾಸ್ತ್ರಗಳು, ಪ್ರದರ್ಶನ ಫೇರಿಗಳೇ ಬೇಸುಗೀಸುಗಳು. ನಾವು ಬಡವರಯ್ಯ ಇವುಗಳೇ ಸಾಕೆಂದು ನಂಬಿರುವೆವಯ್ಯ ಎಂಬ ನಮ್ಮ ಕೊರವೇಶ್ವರ.

ಪಶ್ಚಿಮದ ಆಕ್ರಮಣ ಸಲ್ಲವೆಂಬರಯ್ಯ. ಉತ್ತರ-ಪೂರ್ವದ ಆಕ್ರಮಣವ ಸುಮ್ಮನೆ ಸಹಿಸಿ ಎಂಬಿರಯ್ಯ. ಒಂದೆಡೆ ಹಸ್ತಕ್ಷೇಪವಾದಾಗ ಕೊಲ್ಲೆಂಬರಯ್ಯ. ಇದ್ದೊಂದೆಡೆ ಹಸ್ತಕ್ಷೇಪಕ್ಕಿಳಿದವರ ಮುಂದೆ ಕೈಯೊಡ್ಡುವರಯ್ಯ. ಇಂಥ ಶಕುನಿಗಳ ಕಂಡು ಉದಾಸೀನ ಮಾಡಿದರೆ ಹಂಗೆರಿ ಟಿಬೇಟುಗಳದೇ ಗತಿಯಯ್ಯ ಎಂದು ತಲೆ ತುರಿಸಹತ್ತಿದ ನಮ್ಮ ಕೊರವೇಶ್ವರ.

ರಾಮಿ.

ಕೈ ಬಿಡಿಸಿ ನೋಡ್ತಾರೆ

"ಪಂಡಿತರೇ ! ಪಂಡಿತರೇ !! ಪಂಡಿತರಿದ್ದಾರೆಯೆ ಮನೇಲಿ" ಎಂದು ಬಾಗಿಲಬಳಿ ಒಬ್ಬಾತಕೂಗಿದ. ಬಂದವನ ಜತೆ ಹೆಣ್ಣೊಂದು ನಿಂತಿತ್ತು. ಬೆಳಗಿನ ೭ ಗಂಟೆ ; ಬಾಗಿಲು ತೆರೆದು "ಬಾಪ್ಪ ಏನುಬೇಕಾಗಿತ್ತು" ಎಂದು ಪಂಡಿತರು ಕೇಳಿದರು. "ಮೂರು ತಿಂಗಳಿಂದ ತಿಂದದ್ದು ಜೀರ್ಣ ಆಗುಲ್ಲ. ಕೆಮ್ಮುರುತೇಗು ಬರುತ್ತೆ ಸ್ವಲ್ಪ ಕೆಲಸಮಾಡಿದರೆ ಏದುಬ್ಬಸ ಪಡ್ತಾಳೆ" ಎಂದು ಶುರುಮಾಡಿದ ಬಂದವನು.

"ಔಷಧಿ ಕೊಡೋ ಪಂಡಿತ ನಾನಲ್ಲ. ನಾನು ಬರೀ ಪಾಠ ಹೇಳೋ ಪಂಡಿತ ಅದೂ ಕನ್ನಡದ ಪಾಠ ಅಲ್ಲದೆ ವ್ಯಾಯಾಮ ಪಾಠ ಕಲಿಸ್ತೀನಿ—ಮನೆತನದ ಹೆಸರು ಪಂಡಿತ ಅಂತ—ಔಷಧಿ ಕೋಡೋರು ನನ್ನ ಹೆಂಡತಿ. ಕೂತುಕೊಳ್ಳಿ ಕರೀತೀನಿ ಎಂದು ಪಂಡಿತರು ಡಾಕ್ಟರ್ ಅಂತ ಕೂಗಿದರು "ಏನೂ ಅಂದ್ರೆ" ಅಂತ ಲೇಡಿ ಡಾಕ್ಟರು ಒಳಗಿಂದ ಬಂದರು. ರೋಗಿಗಳನ್ನು ಕಂಡು "ರೋಗಿಗಳನ್ನು ಇಲ್ಲಿ ನೋಡುಕ್ಕೆ ಅನುಕೂಲ ಇಲ್ಲಪ್ಪಾ ! ಒಂಭತ್ತು ಗಂಟೆ ಹೊತ್ತಿಗೆ, ದವಾಖಾನೆ ಹತ್ತಿರ ಬನ್ನಿ. ಬರೀ ಹೊಟ್ಟೇಲಿ ಕರತನ್ನಿ "ಎಂದು ಕ್ಷಣದಲ್ಲಿ ಹೇಳಿ ಅವರನ್ನು ಕಳಿಸಿಕೊಟ್ಟು ಬಾಗಿಲು ಹಾಕಿದರು.

ಪಂಡಿತರು, ಕನ್ನಡದ ಪಂಡಿತರು. ಕವಿಗಳೂ ಹೌದು ವ್ಯಾಯಾಮ ಮಾಡುತ್ತಿದ್ದವರು. ಲಾಲ್‌ಮಟ್ಟೀಲಿ ಕುಸ್ತೀನೂ ಮಾಡಿದವರು. ಕನ್ನಡದಲ್ಲಿ ಗೀತಗಳನ್ನು ಬರೆದವರು. ಕಾಲೇಜಲ್ಲಿದ್ದಾಗ ಅವರ ಗೀತೆಗಳನ್ನು ಹುಡುಗರೆಲ್ಲಾ ಪಲುಕುತ್ತಿದ್ದರು. ಭವಾನಿಬಾಯಿ ಅವರ ಕಾಲೇಜು ಸಹಪಾಠಿ ಇವರು ಬರೆದಿದ್ದನ್ನು ಅವಳು ಹಾಡುತ್ತಿದ್ದಳು. ಓದಿನಲ್ಲೂ ಬಲು ಶಹಣೆ. ಮೆಡಿಕಲ್ ಕಾಲೇಜು ಸೇರಿ ಡಾಕ್ಟರಾದಳು. ಯಾರು ಏನು ಹೇಳಿದರೂ ಕೇಳದೆ ಡಾ|| ಭವಾನಿಬಾಯಿ ಅಲ್ಪ ಸಂಪಾದನೆಯ ಕನ್ನಡ ಪಂಡಿತರನ್ನು ಮದುವೆಯಾದಳು. "ಜೀವನಕ್ಕೆ ಬೇಕಾದಷ್ಟು ಸಂಪಾದಿಸುತ್ತೇನೆ ನಾನು. ಜೀವನವನ್ನು ಅವರು ಸಾರ್ಥಕ ಮಾಡುತ್ತಾರೆ" ಎಂದೇ ಆಕೆಯ ಸುಖದ ಅನುಭವ. ಆತ ಬರೆದಿದ್ದನ್ನು ಈಕೆ ಹಾಡಿ, ಈಕೆ ದುಡಿದಿದ್ದನ್ನು ಆತ ಉಂಡು ಅನ್ಯೋನ್ಯವಾಗಿ ಹಿತ ಜೀವನ ನಡೆಸುತ್ತಿದ್ದರು. ಅಣಿಯಾದ ಮನೆ ಕಲೆಗಾರರು ಅಲಂಕರಮಾಡಿಟ್ಟ ಮನೆ? ಕೇಳಬೇಕೇ ! ಬಲು ಅನುಕೂಲವಾಗಿತ್ತು. ಬಲು ಅಂದವಾಗಿತ್ತು. ಗಾಜಿನ

ಪಾತ್ರೆ ಪಿಂಗ್ಗಾಣಿಸಾಮಾನು ಊಟದ ಮೇಜು. ಬಾಗಿಲ ಪರದೆ. ನವನವೀನವಾದ್ದೇ ಎಲ್ಲಾ.

* * * * *

ಶನಿವಾರ ಮಧ್ಯಾಹ್ನ ಡಾಕ್ಟರು ಮನೆಗೆ ಬಂದು ಪಂಡಿತರೊಂದಿಗೆ ಊಟಕ್ಕೆ ಕುಳಿತಾಗ "ಏನು ಅಂದ್ರೆ" ಎಂದು ತುಸು ಕೋಪದಿಂದಲೇ ಕೇಳಿದಳು ಊಟದ ಮೇಜಿನಮೇಲೆ ತಾಮ್ರದ ಚೊಂಬು ತಾಮ್ರದ ಪಂಚಪಾತ್ರೆ ಇರಿಸಿದ್ದನ್ನು ನೋಡಿ.

"ತಾಮ್ರದ ಪಂಚಪಾತ್ರೇಲಿ ನೀರು ಇರಿಸಿ ಕುಡಿದರೆ ಮಂಡಿನೋವು ಹೋಗುತ್ತೆ ಅಂತ ಶಾಸ್ತ್ರಿಗಳು ಹೇಳಿದರು ಡಾಕ್ಟರ್! ಅಂಗೈಲಿ ಬುಧನ ಗುಡ್ಡದ ಕೆಳಗೆ ನನಗೆ ಅಡ್ಡರೇಖೆ ಇದೆಯಂತೆ ಅದಕ್ಕೆ ತಾಮ್ರ ಒಳ್ಳೆಯದಂತೆ ಎಂದರು ಪಂಡಿತರು.

"ಅಲ್ಲಾ ಅಂದ್ರೆ! ಈಗಿನ ಕಾಲದಲ್ಲೂ ಈ ಮೂಢನಂಬಿಕೆ ಇಟ್ಟ್ಕೊಳ್ಳೋದೇ! ಬುಧನ ಗುಡ್ಡದಲ್ಲಿ ಅಡ್ಡರೇಖೆ ಅಂತ ತಾಮ್ರದ ಪಂಚಪಾತ್ರೇಲಿ ನೀರು ಕುಡಿದರೆ ಮಂಡಿನೋವು ಹೋಗತ್ತ್ಯೇ! ಅದರ ಬದಲು ಅವರೆಕಾಯಿ ತಿನ್ನೋದು ಬಿಟ್ಟರೆ ಹೋಗುತ್ತ್ಯೋ! ಅಂಗೈ ಗೆರೆನೋಡಿ ಹೆರಿಗೆ ಯಾವಾಗ ಆಗುತ್ತೆ ಅಂತ ಹೇಳುಕ್ಕೂ ನಿಮ್ಮ ಶಾಸ್ತ್ರಿಗಳು ಸಿದ್ಧ ಅಂತ ಕಾಣುತ್ತೆ! ಹೇಳೋರು ಹೆಡ್ಡರಾದರೆ ಕೇಳೋರು ಕಿವುಡರಾಗಬೇಕೇ ಬೇಡವೇ? ಎಂದಳು ಡಾಕ್ಟರು.

ಸಂಜೆ ಮುಂದೆ ದವಾಖಾನೆಯಿಂದ ಹಿಂತಿರುಗುವಾಗ ಡಾಕ್ಟರು ಯೋಚಿಸಿ ಒಂದು ನಿರ್ಧಾರಕ್ಕೆ ಬಂದರು. "ಪಂಡಿತರ ಈ ಹುಚ್ಚು ನಂಬಿಕೆಯದ್ನು ಬೇಗ ತಪ್ಪಿಸಲೇಬೇಕು. ಇಲ್ಲದಿದ್ದರೆ ಶಾಸ್ತ್ರಿಗಳಮಾತು ಕೇಳಿಕೊಂಡು ರೇಖೆ ನೋಡಿ ಕೊಂಡು ಮನೆ ಕೆಲಸಮಾಡುಕ್ಕೆ ಶುರುಮಾಡಿದರೆ ವಿಪರೀತಕ್ಕಿಟ್ಟುಕೊಳ್ಳಬಹುದು ನನ್ನ ಬಾಳಿಗೇ ಕಹಿತಾಕಬಹುದು. ಹುಟ್ಟುವ ಮೊದಲೇ ಚಿವುಟಿಹಾಕಬೇಕು" ಎಂದು ಮನೆಗೆ ಬಂದಮೇಲೆ "ಅಂದ್ರೇ! ನಿಮ್ಮ ಶಾಸ್ತ್ರಿಗಳನ್ನು ನಾಳೆ ಸಂಜೆ ಮನೆಗೆ ಕರಕೊಂಡು ಬನ್ನಿ ನಾನೂ ಪರೀಕ್ಷೆಮಾಡಿ ನೋಡ್ತೀನಿ ಅವರನ್ನ ಅವರು ಹೇಳೋಸತ್ಯಾನ್ನ" ಎಂದು ನಗುನಗುತ ಪಂಡಿತರಿಗೆ ಹೇಳಿದರು. ಗಂಡ ಹೆಂಡಿರು ಉಂಡರು.

* * * * *

ಶಾಸ್ತ್ರಿಗಳು ಭಾನುವಾರ ಸಾಯಂಕಾಲ ರಾಹುಕಾಲಕ್ಕೆ ಮುಂಚೆಯೇ ಪಂಡಿತರ ಮನೆಗೆ ಬಂದರು. ಪರಸ್ಪರ ಪರಿಚಯಮಾಡಿಕೊಟ್ಟಮೇಲೆ ಪಂಡಿತರು "ಡಾಕ್ಟರ್! ಕೈ ತೋರಿಸಿ ಶಾಸ್ತ್ರಿಗಳು ಏನು ಹೇಳ್ತಾರೋ ನೋಡೋರಂತೆ" ಎಂದು ಹೇಳಿದರು. ಕೈ ತೋರಿಸಿ ನಾನ್ಯಾಕೆ ಅವಲಕ್ಷಣ ಅನ್ನಿಸಿಕೊಳ್ಳಲಿ, ಉಹ್ಞೂ ಎಂದು ಡಾಕ್ಟರು ತಲೆಯಾಡಿಸಿದರು. "ಮತ್ತೆ ನಿನ್ನೆ ಸಂಜೆ?" ಎಂದು ಪಂಡಿತರು ಶುರು

ಮಾಡಿದಕೂಡಲೇ "ಅಯ್ಯೋ ಕೈ ಪರೀಕ್ಷೆಮಾಡಿಸಿಕೊಳ್ಳುಕ್ಕೆ ನನ್ನಾ ಸ್ನೇಹಿತೀನ ಬರಹೇಳಿದ್ದೆ ಅದನ್ನೇ ನಿನ್ನೆ ಸಂಜೆ ಹೇಳಿದ್ದು. ನನ್ನ ಕೈ ಪರೀಕ್ಷೆ ಅಂತ ನಾನೆಲ್ಲಿ ಹೇಳಿದ್ದೆ. ನನ್ನ ವಿಚಾರ ಎಲ್ಲಾ ನೀವು ಶಾಸ್ತ್ರಿಗಳಿಗೆ ಹೇಳೇಬಿಟ್ಟಿರುತ್ತೀರಿ ಅಂದ ಮೇಲೆ ಅವರು ಹೊಸದು ಏನುತಾನೇ ಹೇಳಾರು" ಎಂದು ಡಾಕ್ಟರು ಹೇಳಿ "ಸಾವಿತ್ರಿ" ಅಂತ ಕೂಗಿದರು.

ಅತಿಥಿಗಳ ಕೊಠಡಿಯಿಂದ ಕೆಂಪು ಸೀರೆ ಮುಸುಕು ಹಾಕಿಕೊಂಡ ಮಧ್ಯ ವಯಸ್ಸಿನ ಕೃಶಾಂಗಿಯೊಬ್ಬಳು ಬಂದು ನಮಸ್ತೆ ಮಾಡಿದಳು. ಶಾಸ್ತ್ರಿಗಳ ಆಕೆಯ ಎಡ ಅಂಗೈ ಹಿಡಿದು ಪರೀಕ್ಷಿಸಿದರು.

"ಬಹಳ ನೊಂದ ಜೀವ" ಎಂದರು ಶಾಸ್ತ್ರಿಗಳು.

ಡಾಕ್ಟರು ಸಾವಿತ್ರಿಯ ಕೆಂಪು ಮುಸುಕಿನ ಕಡೆ ಒಮ್ಮೆ, ಪಂಡಿತರ ಕಡೆ ಒಮ್ಮೆ ಬೇಗ ಬೇಗ ದೃಷ್ಟಿ ಹಾಯಿಸಿದರು. ಪಂಡಿತರ ಮುಖ ಸ್ವಲ್ಪ ಇಳಿಮುಖವಾಯ್ತು.

"ಆದರೆ ಮುಂದಿನ ಭವಿಷ್ಯ ಬಲು ಚೆನ್ನ. ಅಂಗೈಲಿ ಚಂದ್ರನ ಗುಡ್ಡ ಎದ್ದು ನಿಂತಿದೆ. ಅದೃಷ್ಟರೇಖೆ ಬಲವಾಗಿ ಬಿದ್ದಿದೆ. ಸಹಾಯಕ ರೇಖೆಗಳೂ ಹೊರವಾಗಿವೆ" ಎಂದರು ಶಾಸ್ತ್ರಿಗಳು. ಡಾಕ್ಟರ ಮುಖದಲ್ಲಿ ನಗು ಮೂಡುವಂತಾಯ್ತು. ಪಂಡಿತರ ಮುಖ ಸ್ವಲ್ಪ ಬಿಳುಪೇರಿತು.

"ಬಲು ಧೈರ್ಯಶಾಲಿ! ಮುಂದಕ್ಕೆ ಮಕ್ಕಳುಮರಿಗಳಿಂದ ಕೂಡಿ ಸುಖವಾದ ಮುಪ್ಪನ್ನು ಅನುಭವಿಸ್ತಾಳೆ" ಎಂದರು ಶಾಸ್ತ್ರಿಗಳು. ಡಾಕ್ಟರ ಮುಖ ನಗುವಿನಿಂದ ತುಂಬಿತು. ಪಂಡಿತರು ಮುಖ ತಗ್ಗಿಸಿದರು.

"ನೀವೇನಾರೂ ಕೇಳಬೇಕೇಮ್ಮಾ" ಎಂದರು ಶಾಸ್ತ್ರಿಗಳು, ಸಾವಿತ್ರೀನ ಕುರಿತು. ತಲೆಯಾಡಿಸಿದಳು ಸಾವಿತ್ರಿ, ಇಲ್ಲ ಅನ್ನುವ ತೆರನಾಗಿ.

ಸಾವಿತ್ರಿ ಅತಿಥಿಕೊಠಡಿಗೆ ಹೋದಳು. ಪರಿಚಾರಕ ತಂದಿತ್ತ ದಕ್ಷಿಣೆ ತಾಂಬೂಲಾನ ಪಂಡಿತರು ಶಾಸ್ತ್ರಿಗಳಿಗೆ ಅರ್ಪಿಸಿದರು. ಶಾಸ್ತ್ರಿಗಳು ಹೊರಟು ಹೋದರು. "ಸಾವಿತ್ರಿ" ಎಂದು ಡಾಕ್ಟರು ಕೂಗಿದರು. ಸಾವಿತ್ರಿ ಬಂದಳು. ಮನೆಗೆ ಹೋಗಬಹುದು ನಾಳೆ ಬೆಳಗ್ಗೆ ಎಂಟಕ್ಕೆ ದವಾಖಾನೆಗೆ ಬಾ ಎಂದು ಡಾಕ್ಟರೆಂದಾಗ, ಆಕೆಯೂ ಹೊರಟುಹೋದಳು.

ಡಾಕ್ಟರು ಹುಚ್ಚಾಪಟ್ಟೆ ನಕ್ಕರು. ನಗು ಸಮಾಧಾನಕ್ಕೆ ಬಂದಾದ ಮೇಲೆ "ಅಂದ್ರೇ! ನಿಮ್ಮ ಶಾಸ್ತ್ರಿಗಳ ಸತ್ಯ ಚೆನ್ನಾಗಿ ಗೊತ್ತಾಯ್ತು. ತಲೆ ಮಾಡಿಸಿಕೊಂಡು ಕೆಂಪು ಮುಸುಕಿನ ಸಾವಿತ್ರೀಗೆ ಭವಿಷ್ಯ ಬಲ್ಲೆನ್ನು! ಹೌದೂ ಅಂದ್ರೆ!

ಎರಡು ತಿಂಗಳ ಹಿಂದೆ ಹರಕುಬಟ್ಟೆಯ ಸಾವಿತ್ರಿ ದವಾಖಾನೆ ಹತ್ತಿರ ಹೊಟ್ಟೆಗಿಲ್ಲದೆ ಯಾಚನೆಗೆ ಬಂದಳು. ಯಾರೂ ಇಲ್ಲ ನನಗೆ. ಗಂಡ, ಮಕ್ಕಳಿಲ್ಲದ ಗುಂಡು ಗೋವಿ ಏನಾರ ಕೆಲಸ ಕೊಟ್ಟರೆ ಇಲ್ಲೇ ಇರ್ತೀನಿ, ಹೊಟ್ಟೆಗೆ ಹಾಕಿದರೆ ಸಾಕು ಎಂದಳು. ದವಾಖಾನೆ ಗುಡಿಸೋ ಕೆಲಸಕ್ಕೆ ಇಟ್ಟುಕೊಂಡಿದ್ದೀನಿ" ,ಎಂದರು ಡಾಕ್ಟರು.

ಪಂಡಿತರು ಒಳಜೇಬಿಂದ ಸಣ್ಣ ಭೂತಕನ್ನಡಿಯೊಂದನ್ನು ಹೊರಕ್ಕೆ ತೆಗೆದರು. ಡಾಕ್ಟರ ಕೈಗೆ ಕೊಟ್ಟರು. ಅಂಗೈ ರೇಖೆ ಚೆನ್ನಾಗಿ ನೋಡುಕ್ಕೆ ಅಂತ ಇದನ್ನು ಇಟ್ಟುಕೊಂಡಿದ್ದೆ. ಇನ್ನುಮೇಲೆ ಇದರ ಹವ್ಯಾಸಾನೇ ಬೇಡ ಅಂತ ಧೃಡ ಮನಸ್ಸಿನಿಂದ ಹೇಳಿದರು.

ತನ್ನ ಯೋಜನೆ ಸಫಲವಾದ ಕಾರಣ ಡಾಕ್ಟರಿಗೆ ಬಲು ಖುಷಿಯಾಗಿತ್ತು. ಬಾದಾಮಿಹಾಲು, ಬೋಂಡ ರಾತ್ರಿಊಟಕ್ಕೆ ಮಾಡಿಸಿದರು.

* * * *

ಮಾರನೆ ದಿನ ದವಾಖಾನೆಗೆ ಸಾವಿತ್ರಿ ಎಂಟುಗಂಟೆಗೇ ಬಂದು ಸಾರಿಸಿ ಗುಡಿಸಿ ರಂಗೋಲಿ ಇಟ್ಟು ಡಾಕ್ಟರು ಬರುವ ಹೊತ್ತಿಗೆ ಎಲ್ಲವನ್ನೂ ಸಿದ್ಧಪಡಿಸಿದ್ದಳು. ಡಾಕ್ಟರು ಬಂದಮೇಲೆ ಅರ್ಧದಿನ ರಜ ಕೇಳಿ ಹೋದಳು.

* * * *

—ಎರಡು ವರ್ಷಗಳ ನಂತರ—

ಡಾಕ್ಟರ ದವಾಖಾನೆಗೆ ಪುಟಾಣಿ ಮಗುವನ್ನು ಎತ್ತಿಕೊಂಡು ಒಬ್ಬ ಮಧ್ಯವಯಸ್ಸಿನಾತ ಬಂದ. ಅವನ ಹಿಂದೆಯೇ ತುಂಬಿಕೊಂಡಿದ್ದ ಮಧ್ಯವಯಸ್ಸಿನ ಹೆಂಗಸೊಬ್ಬಳು ಕುಲುಕುಲು ನಡೆಯುತ್ತಾ ಬಂದಳು.

"ಜ್ಞಾಪಕ ಇದೆಯೇ ? ಡಾಕ್ಟರೇ– ಮರೆತುಹೋದಿರಾ" ಎಂದಳು.

ಡಾಕ್ಟರುಗಳಿಗೆ ಇದು ಸರ್ವೇ ಸಾಮಾನ್ಯ. ಕ್ಷಮಿಸಬೇಕು ನೆನಪು ಬರಲಿಲ್ಲ ಅಂದರು.

"ನಿಮ್ಮ ಹತ್ತಿರ ಕಸ ಗುಡಿಸೋ ಕೆಲಸ ಮಾಡಿಕೊಂಡು ಇರ್ಲಿಲ್ವೇ ಸಾವಿತ್ರಿ ಅಂತಾ !" ಅಂದಳು ಹೆಂಗಸು.

"ಹ್ಞೂ ಹ್ಞೂ, ಅವಳೇನಾದಳು, ರಜೆ ತೊಗೊಂಡು ಹೋದೋಳು ಪತ್ತೇನೆ ಇಲ್ಲ. ಅವಳ ಕೈಲಿ ಐದು ರೂಪಾಯಿ ಮುಂಗಡ ಬೇರೆ ಕೊಟ್ಟಿದ್ದೆ. ಅದು ಹೋದರೆ ಹೋಗಲಿ. ಅವಳೇನಾದಳು ಅಂತ ತಿಳಿದರೆ ಸಾಕು. ಬಲು ಒಳ್ಳೆಯವಳು" ಎಂದರು ಡಾಕ್ಟರು.

"ನಾನೇ ಸಾವಿತ್ರಿ" ಎಂದಳು ಬಂದ ಹೆಂಗಸು, ಸ್ವಲ್ಪ ನಾಚಿಕೆಪಡುತ್ತಾ.

"ಸಾವಿತ್ರಿ, ಸಾವಿತ್ರಿ! ನಿನ್ನದೇನೇ ಮಗು, ಇವರು ?....ಇವರೇ !" ಎಂದರು ಡಾಕ್ಟರು.

"ಅವತ್ತು ಕೈನೋಡಿದವರು ಧೈರ್ಯಶಾಲಿ ಅಂದರಲ್ಲಾ! ಅದೇ ನನ್ನ ಮನಸ್ಸನ್ನು ಕೊರೆಯುಹತ್ತಿತು. ಬೆಳಿಗ್ಗೆ ನಿಮ್ಮ ಹತ್ತಿರ ರಜೆ ಪಡೆದು, ಟೀ ಮಾರ್ಕೋರ ಆಫೀಸಿಗೆ ಹೋದೆ. ಮನೆಮನೆಗೂ ಟೀ ಪ್ರಚಾರಕ್ಕೆ ಹೆಣ್ಮಕ್ಕಳನ್ನು ನೇಮಿಸಿಕೊಳ್ಳುತ್ತಾರೆ ಅಂತ ಹಿಂದಿನ ಬೆಳಿಗ್ಗೆ ಯಾರೋ ದವಾಖಾನೇಲಿ ಹೇಳಿದ್ದರು. ಅಲ್ಲಿ ಕೆಲಸ ಸಿಕ್ಕಿತು. "ಇವತ್ತಿಂದಲೇ ತೀರ್ಥಹಳ್ಳಿಗೆ ಹೋಗಿ ಕೆಲಸ ಮಾಡ್ತೀಯಾ" ಎಂದರು. ಹ್ಞೂ ಎಂದು ಒಪ್ಪಿ ಹೋದೆ. ಕೆಲಸ ಚೆನ್ನಾಗಿ ಮಾಡಿದೆ ಅಂತ ಭಡ್ತಿ ದೊರೆಯಿತು. ದಕ್ಷಿಣದಲ್ಲೇ ಟೀ ಪ್ರಚಾರದ ಕೆಲಸದಲ್ಲಿ ನಾನೇ ಮೊದಲಿಗಳು ಎಂದು ಪದಕ ಕೊಟ್ಟರು. ಪದಕ ಕೊಟ್ಟ ದೊಡ್ಡ ಅಧಿಕಾರಿಗಳೇ ನನ್ನ ಕೈಯನ್ನೂ ಹಿಡಿದರು. ನೀವು ಅವತ್ತು ಮಾಡಿದ ಉಪಕಾರದಿಂದ ನನ್ನ ಬಾಳೇ ಹಸನುಗೊಂಡಿತು" ಎಂದು ಹೇಳಿ ಡಾಕ್ಟರಿಗೆ ನಮಸ್ಕರಿಸಿ ಮಗುವನ್ನು ಡಾಕ್ಟರ ತೊಡೆಯ ಮೇಲಿಟ್ಟು "ಹರಸಿ ಮಗೂನ" ಎಂದು ಕೇಳಿಕೊಂಡಳು. ಡಾಕ್ಟರಿಗೆ ಸುಲಭವಾಗಿ ಮಾತನಾಡಲಾಗಲಿಲ್ಲ. ಏನೋ ಗಂಟಲು ಒತ್ತಿದಹಾಗಾಗಿತ್ತು.

ತಟ್ಟೆ, ಹೂವು, ಹಣ್ಣು, ವಿಳ್ಯೇದೆಲೆ ಕಾರಿನಿಂದ ತರಿಸಿ ಡಾಕ್ಟರಿಗೆ ಕೊಟ್ಟು ಸಾವಿತ್ರಿ ಗಂಡ ಮಗುವಿನ ಜತೆಗೆ ಹೊರಟುಹೋದಳು. ಒಂದೇ ದಿನ ರಜೆ ಇದ್ದುದು ಗಂಡನಿಗೆ.

ತಾನು ಮಾಡಿದ್ದನ್ನೆಲ್ಲಾ, ಆಡಿದ್ದನ್ನೆಲ್ಲಾ ಗಂಡನಿಗೆ ಹೆಂಡತಿ ಹೇಳೋದು ಅಂತಹ ಜಾಣತನವೇನಲ್ಲ ಅಲ್ಲವೇ? ಅದಕ್ಕೇ ಡಾಕ್ಟರು ಪಂಡಿತರಿಗೆ ಇದನ್ನು ಹೇಳಲೇ ಇಲ್ಲ. ಆದರೆ ಈಗೀಗ ಶಾಸ್ತ್ರಿಗಳ ಮನೆಗೆ ಹೋಗಿಬರುವುದೂ ಹೆಚ್ಚಾಗಿದೆ. ಶಾಸ್ತ್ರಿಗಳು ದವಾಖಾನೆಗೆ ಬರುವುದೂ ಹೆಚ್ಚಾಗಿದೆ. ಒಮ್ಮೊಮ್ಮೆ ಡಾಕ್ಟರನ್ನು "ನನ್ನ ಶಿಷ್ಯೆ" ಎಂದೂ ಶಾಸ್ತ್ರಿಗಳು ಹೇಳಲಾರಂಭಿಸಿದ್ದಾರೆ.

ಈಗ ಡಾಕ್ಟರು ಕೈ ಹಿಡಿದು ನೋಡುಲ್ಲ. ಕೈ ಬಿಡಿಸಿ ರೇಖೆಗಳನ್ನು ನೋಡುತ್ತಾರೆ. ಆಮೇಲೇ ನಾಡಿ ನೋಡಿ ರೋಗದ ವಿಷಯ ಯೋಚಿಸಿ ಮದ್ದು ಮಾಡೋದು.

—ಪ್ರಕಾಶ್

ನವ್ಯ—ಏಕಲವ್ಯ

ವಿಧಾನ ಸೌಧದ ಕಡೆ ನಿಧಾನವಾಗಿ ಸಾಗುತ್ತಿದ್ದರು ರಾಜೀವಪುರದ ನಿವೃತ್ತ ಪ್ರೊಫೆಸರ್ ಶ್ರೀ ಸರಸ್ವತಿಯುತ ದಾಮೋದರಂರವರು. ಜನಜಂಗುಳಿಯ ಗದ್ದಲ ಇರಲಿಲ್ಲ. ಆಟೋರಿಕ್ಷಾಗಳ ಚೀತ್ಕಾರವೂ ಇಲ್ಲ. ನಾಗರೀಕ ಜೀವನದ ಹೊಗೆ ನಗೆ ಏನೂ ಇಲ್ಲ. ವಿಜ್ಞಾನದ ಹಿನ್ನೆಲೆಯಲ್ಲಿ ಋಷ್ಯಾಶ್ರಮದ ಮೌನವನ್ನು ನೋಡಿ ತಣಿಯುತ್ತಾ ನಿವೃತ್ತ ಪ್ರೊಫೆಸರರು ತಮ್ಮ ಹಿಂದಿನ ಕಾಲೇಜು ದಿವಸಗಳನ್ನು ನೆನೆಯುತ್ತಾ ಮುಂದೆ ಸಾಗುತ್ತಿದ್ದರು. ಜೊತೆಯಲ್ಲಿ ಅವರ ಹಿಂದಿನ ಪಟ್ಟ ಶಿಷ್ಯನೂ ನಡೆದುಬರುತ್ತಿದ್ದ. ದಾರಿಯುದ್ದಕ್ಕೂ ವಿದ್ಯುತ್ ಕಂಬಗಳು ಹೊರತು ಮತ್ತೊಂದು ನಿಂತ ಆಕಾರವಿಲ್ಲ! ಪ್ರೊಫೆಸರ್ ಸಾಹೇಬರು ಒಂದು ವಿದ್ಯುತ್ ಕಂಬದ ಅಡಿಯಲ್ಲೇ ನಿಂತರು. ವಿದ್ಯುತ್ ದೀಪಕ್ಕೆ ರೊಯ್ಯನೆ ಒಂದು ಕಲ್ಲು ಬಂದು ಬಡಿಯಿತು. ಹಾಲು ಬಣ್ಣದ ಡೂಮು ಚುಕ್ಕಾ ಚೂರಾಗಿ ಚೆಲ್ಲಾಡಿತು. ಪ್ರೊಫೆಸರರು ಸುತ್ತಲೂ ತಮ್ಮ ನೋಟವನ್ನು ಹರಿಸಿದರು. ಯಾರೂ ಕಾಣಿಸಲಿಲ್ಲ. ಮುಂದೆ ನಡೆಯುತ್ತಾ ಇನ್ನೊಂದು ವಿದ್ಯುತ್ ಕಂಬವನ್ನು ಸಮೀಪಿಸಿದರು. ಕಲ್ಲು ತಾಕಿದ ಶಬ್ದ. ಫಳಾರನೆ ಚಿಮಿಣಿ ಚೂರುಗಳು ಕೆಳಕ್ಕೆ ಬಿದ್ದ ಶಬ್ದ. ಧನುರ್ವಿದ್ಯೆಗೆ ಸರಿ ಸಮಾನವಾದ ಈ ಅಸ್ತ್ರ ವಿದ್ಯೆಯನ್ನು ಕರಗತಮಾಡಿಕೊಂಡು ಶಬ್ದವೇಗದಿಂದ ಕಲ್ಲುಬೀರುವ ಕಲಿಗಾಲದ ಈ ಏಕಲವ್ಯನನ್ನು ನೋಡಬೇಕೆಂಬ ಹಂಬಲು ಪ್ರೊಫೆಸರನ್ನು ಕಾಡಿಸಿತು. ಪಕ್ಕದಲ್ಲೇ ನಿಂತಿದ್ದ ಪಟ್ಟ ಶಿಷ್ಯ ಹೇಳಿದನಂತೆ—"ನೋಡಿ ಸಾರ್, ನನ್ನನ್ನೇ ತುಂಬಾ ಪುಂಡ ಪಟಿಂಗ ಅನ್ನುತ್ತಿದ್ದರಲ್ಲ ಸಾರ್! ನನ್ನನ್ನು ಮೀರಿಸಿರುವ ಈ ಶಿಷ್ಯ ಕೋಟಿ ಸರ್ವ ಸ್ವತಂತ್ರವಾಗಿ ಮರಗಳ ಹಿಂಭಾಗದಲ್ಲಿ ವೃದ್ಧಿಯಾಗುತ್ತಿರುವುದನ್ನು ನೋಡಿ ಸಾರ್" ಎಂದು. ಪ್ರೊಫೆಸರ್ ಸಾಹೇಬರು ಭಾವನಾ ಪರವಶರಾದರು. ಭಾರತವನ್ನು ಕಂಡ ಬುಲ್ಗಾನಿನ್ ಅಂತೆ ಬಗ್ಗಿದರು! ಕೃಶ್ಚೇವ್ ಅಂತೆ ಕುಣಿದಾಡಿದರು. ಐಸನ್‌ಹೋವರ್ ಅಂತೆ ಹಿಗ್ಗಿದರು!—ಮರುಕ್ಷಣದಲ್ಲಿಯೇ ದಲೈಲಾಮರನ್ನು ಜ್ಞಾಪಿಸಿಕೊಂಡು ಕೈಲಿದ್ದ ಹ್ಯಾಟನ್ನು ಬಟ್ಟ ತಲೆಗೆ ಏರಿಸಿ ಬುರುಡೆಯನ್ನು ಕಾದುಕೊಂಡರು!

ಯಾರು ಹಾಗೆ ಕಲ್ಲುಗಳನ್ನು ಬೀರಿದವರು? ಎಂದು ಪ್ರೊಫೆಸರ್ ಸಾಹೇಬರು ಕಬ್ಬನ್‌ಪಾರ್ಕಿನ 'ಬೋಗನ್‌ವಿಲ್ಲ' ಪೊದೆಯಲ್ಲಿ ತಡಕಾಡಿದರು. ಅಲ್ಲಿ ನವ್ಯ ಏಕಲವ್ಯನು ಅಭ್ಯಾಸ ಮಾಡುತ್ತಿದ್ದುದು ಕಂಡುಬಂತು. ಅವರು ಹುಡುಗನ ಮೈದಡವಿ ಮೈ ಎಲ್ಲಾ ಕಣ್ಣು ಮಾಡಿಕೊಂಡು ಮುಗುಳ್ನಗೆ ನಕ್ಕರು. 'ನೀನು ಯಾರು ಮಗು' ಎಂದು ಮಜವಾಗಿ ಕೇಳಿದರು. ನವ್ಯ ಏಕಲವ್ಯ ಹೇಳಿದ.

—ಪ್ರೊಫೆಸರ್ ಸಾಹೇಬರೆ, ನೀವು ನಿವೃತ್ತರಾಗಿ ಆಗಲೇ ಬಹಳ ದಿವಸ ಆಗಿ ಹೋಯಿತು ಆದರೂ ನಿಮ್ಮ ಮಮತೆ, ಪ್ರೀತಿ, ಶಿಸ್ತುಗಳು ಮನೆ ಮಾತಾಗಿವೆ. ನಾಲ್ಕೈದು ವರ್ಷದಿಂದ ನಿಮ್ಮ ಕಾಲೇಜಿನಲ್ಲೇ ನಾನು ಕಲಿಯುತ್ತಿದ್ದೇನೆ. ಒಂದು ಟರ್ಮ್ ಪೂರ್ತ, ನಿಮಗೂ ಹಿಂದಿನ ಪ್ರೊಫೆಸರುಗಳು ಕಾಲೇಜು ಮುಂದುಗಡೆ ನೆಡಿಸಿ ಈಗ ಭಾರಿಯಾಗಿರುವ ಮರಗಳ ಕೆಳಗೇ ಕಾಲ ಹಾಕುತ್ತೇವೆ. ಆ ಅವರಿಗೂ ವಿಶ್ವ ವಿದ್ಯಾನಿಲಯಕ್ಕೂ ಪೂರಾ ಹಣ ತೆರುತ್ತೇವೆ. ಈಗಲೂ ನಮ್ಮಲ್ಲಿ ಅಷ್ಟೋ ಇಷ್ಟೋ ಒಳ್ಳೆಯ ಭಾವನೆಗಳು ಆಗಿಂದಾಗ್ಗೆ ಬಂದರೆ ಆ ಮರಗಳ ಪುಣ್ಯದಿಂದ ಮಾತ್ರ. ಆ ಸ್ಫೂರ್ತಿಯೆಲ್ಲಾ ಅವಕ್ಕೇ ಸಲ್ಲಬೇಕಾದ್ದು. ಈಗ ನಾವು ಒಂದೊಂದು ಗಂಟೆ ಕ್ಲಾಸ್ ರೂಮಿನೊಳಗೆ ಕಾಲ ಕಳೆಯುವುದೂ ಕಷ್ಟಸಾಧ್ಯವಾಗುತ್ತಿದೆ! ಶಿಷ್ಯನ ಮೇಲೆ ಅನುಗ್ರಹವಿಟ್ಟು ತಾವು ದಯಮಾಡಿಸಿದಿರಿ. ಇಲ್ಲಿ ನೋಡಿ–ನಮ್ಮ ಲೆಕ್ಚರರ್‌ಗಳ ವಿಗ್ರಹಗಳು–ಇವರುಗಳನ್ನು ನಾವು ಏಕಾಗ್ರಚಿತ್ರದಿಂದ ನೆನೆಸಿಕೊಂಡು ಕಲ್ಲು ಬೀರಿದೆವು ಎಂದರೆ ಸಾಕು-ಬಸ್ಸಿನ ಗಾಜು ಚೂರು ಚೂರು! ಲೈಟಿನ ಬುರುಡೆ ನೂರು ಹೋಳು! ಇಷ್ಟೇ ಆಯ್ತು ನಮ್ಮ ಬಾಳು ನಮಗೂ ಪಶ್ಚಾತ್ತಾಪ ಉಕ್ಕಿ ಬರುತ್ತೆ. ಹೃದಯವನ್ನು ಏನೋ ಮೀಟುತ್ತೆ! ಆದರೆ ಕೈಗೆ ಕಲ್ಲು ಬರುತ್ತೆ!

ಪ್ರೊಫೆಸರ್ ಸಾಹೇಬರು ಪಕ್ಕಕ್ಕೆ ಸರಿದರು. ನವ್ಯ ಏಕಲವ್ಯನ ಪರಿವಾರ ಯಾವುದೋ ಕೋರಸ್ ಹಾಡಿದರು. 'ನಾನು ತಮ್ಮ ಶಿಷ್ಯ, ಗಾಬರಿಗೆ ಅವಕಾಶವಿಲ್ಲ' ಎಂದ ನವ್ಯ ಏಕಲವ್ಯ.

ಪ್ರೊಫೆಸರ್ ಅಂದರು 'ನೀನು ನಮಗೆ ಶಿಷ್ಯನಾಗಿದ್ದರೆ ಗುರುದಕ್ಷಿಣೆಯನ್ನು ಕೊಡಬೇಕು' ಎಂದು.

'ಸಾರ್! ಅಪ್ಪಣೆಯಾಗಲೀ ಸಾರ್!–ನನ್ನ ಸರ್ವಸ್ವವೂ ನಿಮ್ಮದೆ ಆಗಿದೆ ಸಾರ್' ಎಂದನು ಶಿಷ್ಯ.

'ಹಾಗಾದರೆ ಬೀದಿಯ ದೀಪಗಳನ್ನೂ ಬಸ್ಸುಗಳ ಗಾಜನ್ನೂ ಒಡೆದ ಈ ಪಾಪಪೂರಿತ ಕೈಗಳನ್ನೂ ಕತ್ತರಿಸಿ ಕೊಡು' ಎಂದರು ಪ್ರೊಫೆಸರ್ ಸಾಹೇಬರು.

ನವ್ಯ ಏಕಲವ್ಯ ಪ್ರೊಫೆಸರನ್ನು ಕನಿಕರದಿಂದ ನೋಡಿ ಹೇಳಿದ. "ಕೈ ಕತ್ತರಿಸಿ ಕೊಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ ಸಾರ್, ಕೈ ಕತ್ತರಿಸಿಕೊಂಡರೆ ಪರೀಕ್ಷೆಯಲ್ಲಿ ಉತ್ತರ ಬರ್‍ಯೋಕೆ ಆಗುಲ್ಲವಲ್ಲ ಸಾರ್! ಕಲ್ಲು ಬೀರಿದ ಈ ಪಾಪಪೂರಿತ ಕೈಗಳಿಂದಲೇ ಯದ್ವಾತದ್ವಾ ಉತ್ತರ ಬರೆಸಿ ನಿಮಗೆ ತ್ರಾಸ ಕೊಡಬೇಕಲ್ಲ ಸಾರ್! ಆದರೂ ತಾವು ಒಂದು ಡಿಗ್ರಿ ಸಾಮೂಹಿಕವಾಗಿ ಮುಫತ್ತು ದಯಪಾಲಿಸೋಪಕ್ಷಕ್ಕೆ ನಾನು ಸಿದ್ಧ ಸಾರ್" ಎಂದ.

ಪ್ರೊಫೆಸರ್ ಡಾ|| ದಾಮೋದರಂರವರ ಮುಂದೆ ಇದ್ದಕ್ಕಿದ್ದ ಹಾಗೆಯೇ ಅವರು ಕರೆಕ್ಟ್ ಮಾಡಿದ ಉತ್ತರ ಪತ್ರಿಕೆಗಳು ಹಾಳೆ ಹಾಳೆಯಾಗಿ ಹಾರಾಡಿದವು. ಅವರ ತಲೆ ತಿರುಗಿತು. ಅವರು ಅಂದರು–"ನನಗೆ ಅಧಿಕಾರ ಇಲ್ಲಪ್ಪ! ನಿನ್ನ ಸಲಹೆ ಅಸಾಧ್ಯವೇನೂ ಅಲ್ಲಪ್ಪ ಸರ್ಕಾರಕ್ಕೆ ನಿನ್ನ ಅಹವಾಲನ್ನು ಹೇಳಿಕೋಪ್ಪ. ಅವರು ನಿನ್ನ ಜೊತೆಯವರನ್ನಾದರೂ ಗಮನಿಸಿ ಕೊಟ್ಟಾರು" ಎಂದು.

ಅಷ್ಟು ಹೊತ್ತಿಗೆ ಅಲ್ಲಿ ರಕ್ಷಣಾದಳದವರು ಅಶ್ರುವಾಯುವನ್ನು ಪ್ರಯೋಗ ಮಾಡಿದರು. ಪ್ರೊಫೆಸರ್ ಸಾಹೇಬರ ಎರಡು ಕಣ್ಣಲ್ಲೂ ನೀರು ಧಾರಾಕಾರವಾಗಿ ಸುರಿಯಿತು!

ಹಾ. ರಾ.



ಕಾಲೇಜ್ ಡೇಲಿ ಅಷ್ಟು ಚೆನ್ನಾಗಿ 'ಶಾಂತಮು ಲೇಕ ಸೌಖ್ಯಮು ಲೇದು' ಹಾಡಿದವರು ಇವರೇನಪ್ಪಾ!!

'ರಕ್ತಾಕ್ಷರ'

ಸಹಿಬಿತ್ತು
ಹಸ್ತಾಕ್ಷರ!
ಅಲ್ಲಲ್ಲ-ರಕ್ತಾಕ್ಷರ!!
ಚೀಣದ ಅತಿಕ್ರಮಣದ ವಿರುದ್ಧ ಧಿಕ್ಕಾರ!
ನಡೆದಿತ್ತು ವಿದ್ಯಾರ್ಥಿವೃಂದದ ಚೀತ್ಕಾರ!!
'ಚೀಣಕ್ಕೆ ಧಿಕ್ಕಾರ'!
"ಇಂದು ವಿದ್ಯಾರ್ಥಿಗಳು-ನಾಳೆ ವೀರರು"
ಒಕ್ಕೊರಲಿನ ಚೀತ್ಕಾರ!!

* * *

ವಿದ್ಯಾರ್ಥಿಗಳೆ ಬನ್ನಿ
ತರಗತಿಯ ತೊರೆದು ಹೊರಬನ್ನಿ
ಸುಸಮಯವೆನ್ನಿ
ನಿಮ್ಮ ದೇಶ ಭಕ್ತಿಯ ತೋರಬನ್ನಿ
ಬನ್ನಿ ತರಗತಿಯ ತೊರೆದು ಹೊರಬನ್ನಿ
[ಏನೇ ಬರಲಿ!
ಒಗ್ಗಟ್ಟಿರಲಿ
ಶಾಂತಿ........ಶಿಸ್ತು]
ಎಲ್ಲಿಂದಲೋ ಬಂತು ಬಿತ್ತು
ಕಿಟಕಿ ಬಾಗಿಲ ಗಾಜು
ಫಳ ಫಳಾರನೆ ಸಿಡಿದಿತ್ತು
ಗುಂಪು ನಿಂತು ನೋಡುತಿತ್ತು ಈ ಮೋಜು
ಹವ್ಯಾಹತೆ ಸಾಗಿತ್ತು ಬಾಯಲಿ
'ಶಾಂತಿ ಶಿಸ್ತಿ' ನ ಮಂತ್ರ
ದೇಶ ಭಕ್ತರಾರೋ ಹೂಡಿದ್ದರು
ಗಾಜು ಹೊಡೆಯುವ ತಂತ್ರ

* * *

ರಾಜ ಬೀದಿ ತುಂಬಿತ್ತು
ಯುವಜನದ ಮೆರವಣಿಗೆ ನಡೆದಿತ್ತು
' ಶಾಂತಿ ಶಿಸ್ತಿ ' ನ ಮಂತ್ರ ನಿತ್ಯ ಸಾಗಿತ್ತು
[ಹಾದುಹೋಗುವ ಲಲನೆಯರ
ಮೇಲೆ ಹಲ್ಲೆ ನಡೆದಿತ್ತು]
ನೆರೆದಿತ್ತು ವಿದ್ಯಾರ್ಥಿ ಪರಿಷತ್ತು !
ಒಕ್ಕೊರಲಿನ ಚೀತ್ಕಾರ !
ಚೀಣದ ವಿರುದ್ಧ ಧಿಕ್ಕಾರ !!
" ಇಂದು ವಿದ್ಯಾರ್ಥಿಗಳು-ನಾಳೆ ವೀರರು "
[ದೇಶಕ್ಕಾಗಿ ನಾವು ಜೀವಬಿಡಲು ಸಿದ್ಧ
ಬೇಗ ಹಾದುಹೋಗಲಿ ಮೂರನೆ ಮಹಾ ಯುದ್ಧ
ಸಹಿ ಬಿತ್ತು
ಹಸ್ತಾಕ್ಷರ !
ಅಲ್ತಲ್ತು-ರಕ್ತಾಕ್ಷರ !!

—" ಯಚ್ಚಿಂಪಿ "

ಲಂಚ ತಿತ್ತವನ ಕೆಲ್ಸ ಮಿಂಚಿನಂತಕ್ಕು ||
ಕೊಂಚವಾದರೂ ತೆರು, ತಪ್ಪಿದೊಡೆ |
ಇಂಚು ಜರುಗದು ಕಾರ್ಯ ಸರ್ವಜ್ಞ ||

ಹೋಟಲಲಿ ಸವಿವಾಗ | ಕೂಟೋಗರುಂಡಂತೆ ||
ಬಾಗಿಲಿಗೆ ಬಂದು ಬಿಲ್‌ಕೊಡುವಾಗ |
ಹಾರ್ಟು ಪಾರ್ಟಾದಂತೆ ಸರ್ವಜ್ಞ ||

ಹೋಟಲಲಿ ತಿಂಬುವನು | ಕ್ಯಾಟನಂತಾಗುವನು ||
ಒಂಭತ್ತು ರೋಗದಲಿ ನರಳಿ |
ನವಸಾವ ಕಾಣುವನು ಸರ್ವಜ್ಞ ||

ಗೊಡ್ಡು ಸಾರು ರುಚಿ ಲೇಸು | ಚಟ್ನಿಯನ್ನಹ ಸವಿಲೇಸು ||
ಮೇಲೆ ಅರಿಬೆಂದ ರೊಟ್ಟಿ ಲೇಸು |
ಮನೆಯ ಊಟವೇ ಲೇಸು ಸರ್ವಜ್ಞ ||

—ಕೆ. ಅಮರ್‌ನಾಥ್.

ನೂತನ ಶಿಲ್ಪವಿಧಾನಗಳು

ಭಾರತೀಯರು ಇಂಜಿನಿಯರಿಂಗ್ ವಿಧಾನಗಳಲ್ಲಿ ವಿಸ್ಮಯಕರ ಪ್ರಗತಿಯನ್ನು ಸಾಧಿಸುತ್ತಿಲ್ಲವೆಂಬ ಸಂದೇಹವಾದಿಗಳು ಮುಗಿಲುಹಳ್ಳಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಒಮ್ಮೆ ಭೇಟಿ ಕೊಡಲಿ. ಒಬ್ಬ ಇಂಜಿನಿಯರ್ ಇಪ್ಪತ್ತು ನರಮಾನವರಿಗೆ ಸರಿ ಎಂಬ ನೆಹರೂ ಸಮೀಕರಣ ಸರಿಯೋ ಅಲ್ಲವೋ ಪರೀಕ್ಷಿಸಲಿ. ಭಕ್ರಾ, ದಾಮೋದರ್ ಮೊದಲಾದ ನವೀನ ಪುಣ್ಯಕ್ಷೇತ್ರಗಳಿಗೆ ಎಂ.ಐ.ಟಿ. ಸರಿಯೋ ಮಿಗಿಲೋ ಅವರಿಗೇ ತಿಳಿಯುತ್ತದೆ. ಎಂ.ಐ.ಟಿ. ಕರ್ನಾಟಕಕ್ಕೊಂದು ಹೆಮ್ಮೆಯ ಸಂಸ್ಥೆ.

ಕನ್ನಡ, ಇನ್ನಾವ ಭಾಷೆಗೆ ಯಾತರಲ್ಲಿ ಕಡಿಮೆ? ಇಂಗ್ಲೀಷು ಹಿಂದಿಗಳ ನೇತಾರರಿಗೆ ನಮ್ಮ ಭಾಷೆಯು ವಿನಾ, ಅವಳಿಗೆ ಹಳೆಯ ಗಂಡನ ಪಾದದಂತೆ, ಇನ್ನಾವ ಗತಿಯೂ ಇಲ್ಲವೆಂಬ ವಿಷಯ ಗೊತ್ತೇ? ಬುದ್ಧಿ ನವನವೋನ್ಮೇಷಶಾಲಿಯಾದಾಗ ನಡೆದುದೆ ಮಾರ್ಗಂ ಅಲ್ಲವೇ? ಹೀಗೆಂಬ ಅಸಂಖ್ಯಾತ ಸವಾಲುಗಳನ್ನು ಎಂ.ಐ.ಟಿ. ಹಾಕುತ್ತಿದೆ. ಅದಕ್ಕಿದಿರುಂಟೇ?

ಎಂ.ಐ.ಟಿ.ಯ ನೂತನ ಶಿಲ್ಪ ವಿಧಾನಗಳ ಸಮೀಕ್ಷೆಯನ್ನೀಗ ಮಾಡೋಣ. ಒಂದು ಸೇತುವೆ ಕಟ್ಟಬೇಕಾಗಿದೆ ಎನ್ನಿ. ನೂರೈವತ್ತು ಅಡಿ ಉದ್ದವಾಗಿರಬೇಕಾಗಿದೆ ಎಂದುಕೊಳ್ಳೋಣ. ಅದೇಕೆ ಎಂದರೆ, ಹಾಗಾಗದ ವಿನಾ, ಹಳ್ಳದಲ್ಲಿಳಿದು ಹೋಗಬೇಕಾಗುವ ಪರಿಸ್ಥಿತಿ ನಿಮಗೆ ಬರುತ್ತದೆ. ಹಳ್ಳ ಬಂದಾಗ ದ್ವಿಪಾದಿಗೆ ಅದು ಅಸಾಧ್ಯ ಎಂದು ನಮಗೂ ನಿಮಗೂ ತಿಳಿದೇ ಇದೆ. ಹಳ್ಳ ಬರಲಿ ಬರದಿರಲಿ ಲಾರಿ, ಬಸ್ಸು ಮೊದಲಾದ ಷಟ್ಪದಿಗಳಿಗೆ ಅದು ಅಸಾಧ್ಯ. ಆ ಸೇತುವೆಯ ಡ್ರಾಯಿಂಗ್ ಎಸ್ಟಿಮೇಟ್ ಇತ್ಯಾದಿಗಳನ್ನು ತಯಾರಿಸಿ ಎಂದು ಪ್ರೊ॥ ಭಗವಾನ್ ಜಾನೇ ತಮ್ಮ ಶಿಷ್ಯರಿಗೆ ತಿಳಿಸಿದರು. ಹೇಗೆ ಮಾಡಬೇಕು? ಐವತ್ತು ಅಡಿ ಉದ್ದದ ಮೂರು Span ಸೇತುವೆಯನ್ನು ಕಟ್ಟೋಣ ಎಂದ ಒಬ್ಬ ಹುಡುಗ. "ಸರಿ, ಹಾಗೇ ಆಗಲಿ. ಡ್ರಾಯಿಂಗ್ ಮಾಡಿ" ಎಂದರು ಪ್ರೊಫೆಸರು. ಆ ತಕ್ಷಣ ಮತ್ತೆ ಹೇಳಿದರು. "ಎರಡೇ Span ಡ್ರಾಯಿಂಗ್ ಮಾಡಿ. ಮೂರು ಸ್ಪ್ಯಾನ್ ಬೇಡ" ಆಗ ಹುಡುಗನೊಬ್ಬ "ಅಲ್ಲ ಸಾರ್, ಎರಡು ಸ್ಪ್ಯಾನಿಗೆ ನೂರಡಿ ಆಯಿತು.

ಇನ್ನೈವತ್ತಡಿಗೆ ಸೇತುವೆ ಬೇಡವೇ?" ಎಂದು ಕೇಳಿದ. ಪ್ರೊಫೆಸರು ವಿಚಲಿತ ರಾಗದೆ ಹೇಳಿದರು. "ಮೂರು ಸ್ಪ್ಯಾನಿಗೆ ಡ್ರಾಯಿಂಗ್ ಷೀಟು ಆಗುವುದಿಲ್ಲ. ಆದುದರಿಂದ ಅದು ಅಸಾಧ್ಯ!" ಸರಿ, ಎರಡು ಸ್ಪ್ಯಾನಿನ ಸೇತುವೆ ಕಟ್ಟಿದ್ದಾಯಿತು. ಅದರ ಅಲ್ಟಿಮೇಟ್ ಲೋಡ್ ಕಂಡುಹಿಡಿಯುವ ಬಗೆಗೆ ಚರ್ಚೆ ನಡೆಯಲಾರಂಭಿಸಿದರು.

ಸಂಪ್ರದಾಯ ಶರಣನಲ್ಲದ ಹುಡುಗ ಒಂದು ಅತ್ಯಂತ ಹೊಸ ವಿಧಾನ ವಿವರಿಸಿದ. "ಇಗ ನೋಡ್ರಿ ಸಾ. ಹಿಂಗ್ಯಾಕೆ ಮಾಡ್ಬಾರ್ದು. ಸೇತುವೆ ಮ್ಯಾಲೆ ಲೋಡ್ ಹೇರ್ತಾ ಹೋಗದು. ಹೇರೂ ಹೇರೂ ಹೇರೀ, ಇನ್ನೇನು ಮುರ್ಕಂತಂತೆ ಅಂದಾಗ ಒಟ್ಟು ಎಷ್ಟು ತೂಕೈತೆ ಅಂತ ಲೆಕ್ಕ ಹಾಕದು!"

ಇದೀಗ ಮೂಲಭೂತ ಕ್ರಮವಲ್ಲವೇ? ಕೇವಲ ಭಾರತೀಯ ವಸ್ತುಗಳನ್ನೇ ಉಪಯೋಗಿಸಿ, ಈ ವಿಧಾನದಿಂದ ನಾವು ಹೇರಳವಾದ ವಿದೇಶೀ ವಿನಿಮಯವನ್ನು ಉಳಿಸಬಹುದು.

"ಶಿಷ್ಯಾದಿಚ್ಛೇತ್ ಪರಾಜಯಂ" ಎಂಬಂತೆ ಎಂ.ಐ.ಟಿ. ಹುಡುಗರೇ ಎಷ್ಟೋ ಬಾರಿ ಉಪಾಧ್ಯಾಯರಿಗೆ ದಾರಿ ತೋರಿಸುತ್ತಾರೆ. ಸಾಯಿಲ್ ಮೆಕ್ಯಾನಿಕ್ಸ್ ವಿದ್ಯಾರ್ಥಿಗಳು ತಮ್ಮ ವ್ಯಾಸಂಗಕ್ಕಾಗಿ ಉಪಯೋಗಿಸುವ ಪುಸ್ತಕವೊಂದರ ರೋಮಾಂಚಕಾರೀ ಕತೆಯನ್ನು ಕೇಳಿ. ಅದು ಅಮೆರಿಕದ ಮೆಸೆಚುಸೆಟ್ಸ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ನಕಲೀ ಮಾಲುಗಳಿಗೆ ಮೋಸ ಹೋಗಬೇಡಿ. ಎಂ.ಐ.ಟಿ.ಯ ಅಸಲು ಮಾಲು ಭಾರತದ್ದು) ಪ್ರಕಾಶನ. ಅದರ ಲೇಖಕ ಡೊನಾಲ್ಡ್ ಲ್ಯಾಂಬ್. ಆದರೆ ಹುಡುಗರು ಆ ಪುಸ್ತಕವನ್ನು ತಂತೀ ಪುಸ್ತಕ ಎನ್ನುತ್ತಾರೆ. ಅದು ತಂತಿಯಿಂದ ಬೈಂಡ್ ಆದ ಪುಸ್ತಕ (ಪಾರಿಭಾಷಿಕ ಶಬ್ದಗಳಿಗೆ ನಮ್ಮಲ್ಲೇನು ಕೊರತೆ!) ಕಾಲಕ್ರಮೇಣ 'ತಂತಿಯಲ್ಲಿ ಹಾಗೆ ಬರೆದಿದೆ'. 'ತಂತಿ ಓದಿದ್ದೀಯೋ ಇಲ್ಲವೋ' ಎಂಬ ಮಾತುಗಳು ವಿದ್ಯಾರ್ಥಿವೃಂದದಲ್ಲಿ ಸಹಜವಾದವು. ಒಂದು ಬಾರಿ ಉಪಾಧ್ಯಾಯರು ಹೇಳಿದ ವಿಷಯವನ್ನು ವಿದ್ಯಾರ್ಥಿಯೊಬ್ಬ ವಿರೋಧಿಸಿದಾಗ ಅವರು ರೇಗಿ "ಏನಯ್ಯ, ನನಗೇ ಹೇಳ್ತೀಯಾ? If you want you may refer Soil Mechanics by ತಂತಿ. ತಂತಿಗೆ ಗೊತ್ತಿಲ್ಲದ್ದು ನಿನಗೆ ಗೊತ್ತೋ?" ಎಂದು ಚೀರಿದರಂತೆ. ಇಂತಹ ಸರ್ವಜ್ಞ ಅಧ್ಯಾಪಕರ ಕೈಯಲ್ಲಿ ನಮ್ಮ ಹುಡುಗರಿಗೆ ಯಾವ ಭಯ?

ತಮಗೆ ತಿಳಿಯದ ವಿಷಯವಾದರೆ, ಅದನ್ನು ಸಂಪೂರ್ಣವಾಗಿ ಸಂಶೋಧಿಸಿ ತಿಳಿದುಕೊಳ್ಳುವ ವಿಷಯದಲ್ಲಿ ಎಂ.ಐ.ಟಿ.ಯವರು ಯಾರಿಗೂ ಕಡಮೆಯಿಲ್ಲ. ರಸ್ತೆ

ಗಳ ನಿರ್ಮಾಣವನ್ನು ಬೋಧಿಸುತ್ತಾ ಪ್ರೊಫೆಸರ್ ಕಿಪ್ಪಣ್ಣನವರು ಹುಡುಗರನ್ನು ಹೀಗೆಂದು ಪ್ರಶ್ನಿಸಿದರು. "What is a hairpin bend ?"

ಹುಡುಗನೊಬ್ಬ ಎದ್ದುನಿಂತು "Sir, if the road is........"ಎಂದು ಕೈಯನ್ನು ಅಂಕುಡೊಂಕು ಮಾಡಿದ.

ಪ್ರೊಫೆಸರು "ಐಸೀ, ನಿಂಗೆ ಇಂಗ್ಲೀಸ್ ಬರ್ದಿದ್ರೆ ಕನ್ನಡದಗೆ ಹೇಳು" ಎಂದರು. ಹುಡುಗನಿಗೆ ಮುಖಭಂಗವಾಯಿತು. "ಸಾ, If the road is ಸೊಟ್ಟಸೊಟ್ಟಾಗಿದ್ರೆ ಅದ್ಕೆ it is called Hairpin bend".

"ಅದ್ಹೆಂಗಾಗ್ತದಲೇ ತಮ್ಮ?" ಎಂದರು ಪ್ರೊಫೆಸರು.

"ಸಾ, If the road is ಇನ್ನೂ ಹೆಚ್ಚು ಸೊಟ್ಟೊಟ್ಟಗ........"

"ಅದಲ್ಲ ಕಣೋ ತಮ್ಮ. ಹೇರ್ಪಿನ್ ಬೆಂಡು ಅಷ್ಟು ಸುಲಭಕ್ಕಾಗಲ್ಲ" ಎಂದರು ಪ್ರೊಫೆಸರು. ಹುಡುಗ ಕೈಯನ್ನು ಅತಿ ವೇಗದಿಂದ ವಕ್ರೀಕರಿಸುತ್ತಾ "ಸರ್ If the road ಭಾಳ, (ತನ್ನ ಕೈತೋರಿಸಿ) ಹಿಂಗೆ Curves ಆಗಿದ್ರೆ it is and must be Hairpin bend" ಎಂದು ಅಂತಿಮ ಸಿದ್ಧಾಂತ ಮಾಡಿದ.

"ಹಂಗ್ಯಾಕಿರ್ತತೆ ಆ ರೋಡು ? ಹೇರ್ಪಿನ್ ಹೆಂಗಿರ್ತದೆ ?" ಎಂದು ಪ್ರೊಫೆಸರು ವಿಮನಸ್ಕರಾಗಿ ಸಂಶಯ ಸೂಚಿಸಿದರು.

ಹಾಗಾಗಿಯೇ ನಮ್ಮ ಎಂ.ಐ.ಟಿ. ವಿದ್ಯಾರ್ಥಿಗಳು ಹೆರ್‌ಪಿನ್ ನೋಡಲು ಸ್ತ್ರೀಯರ ಶಾಲಾ ಕಾಲೇಜುಗಳಿಗೆ ನಿಯೋಗ ಹೊರಟು ಉಗಿಸಿಕೊಳ್ಳಬೇಕಾಗಿತ್ತು.

ಬರಿಯ ಎಂ.ಐ.ಟಿ. ಪ್ರೊಫೆಸರುಗಳೇ ಅಲ್ಲ, ವಿದ್ಯಾರ್ಥಿಗಳೂ ನೂತನ ವಿಧಾನ ನಿರ್ಮಾಣದಲ್ಲಿ ನಿಪುಣರು. ಎಲೆಕ್ಟ್ರಿಕ್ ಲ್ಯಾಬರೇಟರಿಯಲ್ಲಿ ಸಾಕಷ್ಟು ಬೆಳಕಿಲ್ಲದೆ, ಸಂಸ್ಥೆಯ ಉನ್ನತಾಧಿಕಾರಿಗಳ ಸಮಿತಿಯೊಂದು ಆ ಕೆಲಸ ಮಾಡಲು ನಿಯೋಜಿತವಾಯ್ತು. ಅದು ತಿಂಗಳುಗಟ್ಟಲೆ ಆಲೋಚನೆ ನಡೆಸಿ ದಿಗ್ಭ್ರಮೆಗೊಂಡಿತು. ಆಗ ವಿದ್ಯಾರ್ಥಿಯೊಬ್ಬನು (ಸಿವಿಲ್) ಆ ವಿಷಯವನ್ನು ತಿಳಿದು, ಲ್ಯಾಬರೇಟರಿಯಲ್ಲಿ ಇರುವ ಎಲ್ಲಾ ಹೋಲ್ಡರುಗಳಿಗೂ ಬಲ್ಬ್ ಹಾಕಿ, ಕೆಟ್ಟಿರುವ ಟ್ಯೂಬ್‌ಲೈಟುಗಳನ್ನೆಲ್ಲಾ ತೆಗೆದು ಹೊಸ ಟ್ಯೂಬುಗಳನ್ನು ಹಾಕಬೇಕೆಂದು ಸಲಹೆಕೊಟ್ಟ. ಅವನಿಗೆ M.E. ಏಕೆ ಕೊಡಬಾರದು ಎಂದು ಸಂಸ್ಥೆ ಆಲೋಚಿಸುತ್ತಿದೆ.

ಅಲ್ಲದೆ, ವಿಶ್ವದಾದ್ಯಂತ ಎಲ್ಲ ಖಂಡಗಳಲ್ಲೂ ಎಲ್ಲ ಹವಾಮಾನಗಳಲ್ಲೂ ವ್ಯತ್ಯಾಸವಿಲ್ಲದೆ ಒಂದೇ ರೀತಿ ಕೆಲಸ ಮಾಡುವ 'ರಿಮೋಟ್ ಕಂಟ್ರೋಲ್ ಆಫ್ ಎಲೆಕ್ಟ್ರಿಕ್ ಸ್ವಿಚಸ್' ಎಂಬ ನವವಿಧಾನ ಎಂ. ಐ. ಟಿಯಲ್ಲೇ ಕಂಡುಹಿಡಿಯಲಾಯ್ತು. ಕಟ್ಟಡಕ್ಕೆ ಎಲೆಕ್ಟ್ರಿಕ್ ವೈರಿಂಗ್ ಮಾಡಿದ ಕಂಟ್ರ್ಯಾಕ್ಟರು ಛಾವಣಿಯ ಬಳಿ ಸ್ವಿಚ್ಚುಗಳನ್ನು ಹಾಕಿದಾಗ ಈ ವಿಧಾನ ಕಂಡುಹಿಡಿಯುವುದು ಅನಿವಾರ್ಯವಾಯ್ತು. ಅದಕ್ಕಾಗಿ ಹತ್ತಡಿ ಉದ್ದದ ಒಂದು ನೂರು ಗಳುಗಳನ್ನು ತರಿಸಿ ಅದರ ತುದಿಗೆ ಬಾಗಿದ ಮಳೆ ಬಡಿಯಲಾಯ್ತು. ಈಗ ಶ್ರಮವಿಲ್ಲದೆ ಸ್ವಿಚ್ ಹಾಕಬಹುದಾಗಿದೆ.

ಹೀಗೆ ಭೂವ್ಯೋಮಾಕಾಶಗಳನ್ನೇ ಅಲುಗಿಸಬಲ್ಲ ಎಂ. ಐ. ಟಿಯ ಪ್ರೊಫೆಸರುಗಳಿಗೆ ಕೊಂಚವೂ ಜಂಬವಿಲ್ಲ. ಅವರು ಯಾವಾಗಲೂ open to new influences.

ಮೊನ್ನೆ ಪ್ರೊಫೆಸರ್ ಕಿಪ್ಪಣ್ಣನವರು, ಬೋರ್ಡಿನ ಮೇಲೆ ಏನನ್ನೋ ಬರೆದರು. ಹಿಂದಿನ ಬೆಂಚಿನಲ್ಲಿ ಕುಳಿತ ಹುಡುಗರಿಬ್ಬರು 'ದಿಲ್ ದೇಕೆ ದೇಖೋ' ಪ್ರಾಜೆಕ್ಟಿಗೆ ಎಷ್ಟು ಖರ್ಚಾಗುತ್ತದೆ ಎಂದು ಲೆಕ್ಕ ಹಾಕುತ್ತಾ ನಗುತ್ತಿದ್ದರು.

ಕಿಪ್ಪಣ್ಣನವರು 'ಎದ್ನಿಂತ್ಗಳೋ ತಮಾ, ಯಾಕೆ ಕಿಸೀತೀ' ಎಂದರು ಹುಡುಗ "ದಿಲ್ ದೇಕೆ ದೇಖೋ........" ಎಂದು ಪಿಸುದನಿಯಲ್ಲಿ ಆರಂಭಿಸಿದ.

"ಎಲ್ಲಾನ ತಪ್ಪಾಗೆತೇನೋ ನಾಂಬರ್ದ್ರಿರದು ? ಮನ್ಯಗೋದ್ಕೆಂಡು ಬಂದಿದಿಯಾ ? ತಪ್ಪಿದ್ರೆ ಹೇಳು. ನೀನು ಇಷ್ಟರ ಮಟ್ಗೆ ಓದ್ಕೆಂಬಂದ್ರೆ ನಂಗ್ಗೊಟ್ಟೆ ಗುರ್ಯೇನೋ ?"

"ಇಲ್ಲ ಸಾ, ನಾನೆಲ್ಲಾರ ಓದ್ಕೆಂಬರ್ತಿನೇ........"

ಕಿಪ್ಪಣ್ಣನವರು ಮೇಜಿನ ಮೇಲಿಟ್ಟಿದ್ದ ಟೆಕ್ಸ್ಟ್ ಬುಕ್ ತೆಗೆದರು. ಸ್ಪೆಲಿಂಗು ತಪ್ಪಿತ್ತು. ತಿದ್ದಿಕೊಂಡರು. ಬಳಿಕ ಆ ಪುಸ್ತಕ ನೋಡಿಕೊಂಡೇ ತಪ್ಪಿಲ್ಲದೆ ಬರೆಯಲಾರಂಭಿಸಿದರು.

—ಅ. ರಾ. ಸೇ.

ಬೋಲಿಟ್ಟಾ

[ಲೊಲಿಟಾ ೪೦ ರೂಪಾಯಿಗಳ ಲಕ್ಷ ಪ್ರತಿ ಮುಗಿದು ೧೩೦ ರೂಗಳ ಪ್ರತಿಗಳು ೨ ಲಕ್ಷ ಖರ್ಚಾಗಿವೆಯಂತೆ ಬೊಲಿಟ್ಟಾಗೂ ಹಾಗಾಗುವುದಾದರೆ ಇಂದೇ ಪ್ರಕಟಿಸಬಹುದು ನಿಮ್ಮ ಅಭಿಪ್ರಾಯ ತಿಳಿದ ಮೇಲೆ.]

" ವ್ಯಾಸಮಾವ್ ಸಾಭಿಟೋವ್ ! ಏನೆಲ್ಲಾ ಆಲೋಚನೆಗಳು ನಿನ್ನ ತಲೆಯಲ್ಲಿ ಗುಂಗು ಗುಂಗಿಡುತ್ತಿತ್ತು, ಆ ಕಾಲದಲ್ಲಿ ! ನಿಂಗೇನು ಮಂಕುಬಡಿದಿತ್ತೇ ಆಗ. ಎಂದು ನನ್ನನ್ನು ನಾನೇ ಕನ್ನಡಿ ಎದುರಿಗೆ ನಿಂತು ನೋಡಿಕೊಂಡಾಗ ಕೇಳಿದೆ ! " ನೀನೇನು ರಾಕ್ಷಸನೇ ? ದೆವ್ವವೇ ? ರಾಜಕಾರಣಿಯೆ ? ಯುವರಾಜನೇ ? ಈ ರೀತಿ ಮುಗ್ಧ ಕುಮಾರಿಯ ಸಹವಾಸವನ್ನು ಯಾರಿಗೂ ತಿಳಿಯದಂತೆ ಮಾಡಿದ್ದೀಯಲ್ಲಾ " ಎಂದೂ ಕೇಳಿದೆ, ಕನ್ನಡಿಯನ್ನು.

" ನಿನಗಿಂತ ಹತ್ತು ಹದಿನೆಂಟು ವರ್ಷ ಹೆಚ್ಚು ವಯಸ್ಸಾಗಿರಬಹುದು ಆ ಮುಗ್ಧೆಗೆ ! ಆದರೂ ಕುಮಾರಿ ಅಂತ ಎಲ್ಲರೂ ಅನ್ನುವುದನ್ನು ಮರೆತೆಯಾ ? ನಿನಗಿಂತ ಒಂದು ಮೊಳ ಕುಳ್ಳಾಗಿರಲಿಲ್ಲವೆ ! ಅದನ್ನೂ ನಿರ್ಲಕ್ಷಿಸಿದೆಯಾ ಘಾತುಕ " ಎಂದು ಕನ್ನಡಿ ಮುಖದ ಮೇಲೆ ಉಗಿಯುವುದರಲ್ಲಿದ್ದೆ.

ಒಪ್ಪಿಕೊಳ್ಳುತ್ತೇನೆ. ಆಗಿದ್ದು ಆಗಿ ಹೋಯ್ತು. ಹೀಗಾಯ್ತಲ್ಲ ಅಂತ ದುಃಖವೂ ಇಲ್ಲ ನನಗೆ. ನಾಚಿಕೆಯೂ ಇಲ್ಲ ನನಗೆ. ಬೊಲಿಟ್ಟಳ ಭೇಟಿಯಾದದು ಧರ್ಮರಾಯನ ಕರಗದಲ್ಲಿ. ಒಂದೊಂದು ಅರವಟ್ಟಿಗೆ ಹತ್ತಿರ ಕೂಡ ನಾವು ಹತ್ತಾರು ಸಲ ಭೇಟಿಯಾದೆವು. ನನ್ನ ವಯಸ್ಸಿನ ಮಗ ಇದ್ದಿರಬಹುದಾಗಿತ್ತು ಆ ಕುಮಾರಿಗೆ ಆದರೂ ಶಿವಲೀಲೆ ಕವಿದಿತ್ತು, ಮಂಕುಬೂದಿ ಮುಚ್ಚಿತ್ತು ನನ್ನನ್ನು. ಆ ಹಾ! ಎಂತಹ ಹೆಸರು! ನಾಲಿಗೆ ಮೇಲೆ ಕುದುರೆ ಕಾಲು ಆಡಿದ ಹಾಗೆ ಬೊ....ಲಿ....ಟ್ಟಾ ಬೊಲೀ....ಟಾ....! ಬೊ....ಲಿ....ಟಾ ! ಪಾಪ ! ಬೊಲಿಟಾಳಿಗೆ ಗೊತ್ತೇ ಇರಲಿಲ್ಲ. ಶುದ್ಧ ಮುಗ್ಧೆ ! ಅರವಟ್ಟಿಗೆ ಅಜಮಾಯಿಷಿ ಮಾಡುಕ್ಕೆ ನಾನು ಹೋದಾಗ ಬೋಲಿಟಾಳನ್ನು ಪಾನಕದ ಪರೀಕ್ಷೆಗೆ ಉಪಯೋಗಿಸಿಕೊಳ್ಳುತ್ತಿದ್ದೆ. ಇನ್ನೊಂದು ದೊನ್ನೆ ಕುಮಾರಿ ಕೇಳಿದರೆ ಸರಬರಾಜು ಸರಿಯಾಗಿದೆ ಅಂತ ವರದಿ ಒಪ್ಪಿಸುತ್ತಿದ್ದೆ ಸಾಹುಕಾರರಿಗೆ.

ಯಾವ ಝಾಮದಲ್ಲಿ ಬೊಲಿಟಾಳ ದೃಷ್ಟಿ ಜೇಡಳ ತರಹ ನನಗೆ ತಾಕಿತೋ ನಾನರಿಯೆ! ಕೂದಲು ಬೆಳೆದ ಮುಂಗೈ ತೋರುತ್ತ ಪಾನಕದ ದೊನ್ನೆಯೊಂದನ್ನು ನನಗೆ ಕೊಟ್ಟಾಗಲಿರಬಹುದು. ಕನ್ನಡಕ ತೆಗೆದು ಮೂಗಿನ ದಿಂಡಿನ ಮೇಲೆ ಕನ್ನಡಕದ ಕಮಾನು ಮಾಡಿದ್ದ ಗೆರೆಯನ್ನು ಕೆರೆದುಕೊಂಡಾಗ ಇರಬಹುದು ಅಂತೂ ನನ್ನ ಬಲಗೈ ಹಿಡಿದಳು.

ಹಾದು! ಮರ್ಯಾದಸ್ಥನಾಗಿದ್ದರೆ, ಮದುವೆ ಮಾಡಿಕೋತೀನಿ ಅಂತ ಹೇಳ ಬೇಕಾಗಿತ್ತು ಆದರೆ ಮನೇ ತುಂಬಾ ಹೆಂಡತಿಯೊಬ್ಬಳಿದ್ದಳು. ಸಣ್ಣ ಮನೆ ನಂದು ದೊಡ್ಡ ಹೆಂಡತಿ ಬೊಲಿಟಾಗೆ ಅಲ್ಲಿ ಸ್ಥಳವೆಲ್ಲಿ. ಆ ವೇಳೆಗೆ ಕರಗ ಬಂತು ಅಂತ ಕೂಗಿದರು.

ಕೈಯಾಡಿಸಿಕೊಂಡು ಓಡಿದೆ. ತಪ್ಪಿಸಿಕೊಂಡೆ.

ಪೂರ್ಣ ವಿವರಗಳ ದುಃಖಮಯ ಜೀವನ ಚರಿತ್ರೆಯನ್ನು ಸಚಿತ್ರ ಮುಂದೆ ಪ್ರಚುರಪಡಿಸುತ್ತೇನೆ.

—ನಾಭಿಟೋವ್.



ಮಹಡಿ ಮೇಲೆ ಜಾಗ ಇಲ್ಲದ್ರೆ ಮುಂದಿನ ಟ್ರಿಪ್‌ನಲ್ಲಿ ಬರ್‍ತೀವಪ್ಪ"

ಇರುವುದೊಂದೇ ದಾರಿ

ಕಾಲಕಳೆದೀತಲ್ಲಾ, ಜ್ಞಾನ ಬರಾಲಿಲ್ಲಾ !

—ಜನಪದಗೀತೆ.

....

ಬಳೆಗಾರ ಹನುಮಣ್ಣ ಬಹುದೊಡ್ಡ ವೇದಾಂತಿ, ನಮ್ಮೂರಿನವನಲ್ಲ
ವಾದರೂ, ಭವ ಭವದ ಯಾವ ಬಂಧನ ನಮ್ಮ ಸಖ್ಯದಿಂಧನವಾಗಿ
ಪರಿಣಮಿಸಿ ಉರಿಯುವುದೊ ಆ ಕರ್ತನೇ ಬಲ್ಲ.

ಬಳೆಗಾರ ಹನುಮಣ್ಣ ಹಗಲಿನಲು ಇರುಳಿನಲು ಉರಿಗಣ್ಣ
ನಾದರೂ ಅವನ ಹೃದಯದ ಬಣ್ಣ ಬಿಳಿಸುಣ್ಣ ಅಂತವರು
ಹಲಕೆಲರು ಅರಿಯದಿಹರುಳಿದವರು.

ಹಿಂದೊಮ್ಮೆ ಹನುಮಣ್ಣ ಬಂದು ನಮ್ಮೂರಿಂಗೆ ಬಳೆಯ
ಮಲ್ಲಾರವನು ಎಡಭುಜದಿ ಹೊತ್ತು ತಾಂಬೂಲವನು ಜಗಿಯುತ್ತ
'ಬಳೆಬೇಕೆ ಬಳೆ' ಎಂದು ತಾರಕದಲೊದರುತ್ತ, ದೊಡ್ಡ ಬೀದಿಯ
ಸಂದಿಯಡ್ಡಮನೆಯೆದುರಿನಲಿ ಬರುತಲಿರೆ ದನಿಯೊಂದು ಕರೆಯೆ
ಪಕ್ಕಕ್ಕೆ ತಿರುಗಿ ಕಂಡನೊಬ್ಬಳನಲ್ಲಿ, ಹೋಗಿ ಪಡಸಾಲಿಯಲಿ
ಕುಳಿತು ಪಸರವ ಹರಹಿ 'ಏನುಬೇಕೆಲೆತಾಯಿ ?' ಎಂದು ಕೇಳಿದ
ಮನವೊ: ಓ ನೀರೆ ಲಾವಣ್ಯಸಾರೆ ಸಂಸಾರ ಸುಖಸಾರೆ ಪ್ರೇಮಾಕಾಶ
ತಾರೆ ಮನ್ಮನವಿದಾರೇ ;

ಓ ಲಲನೆ ನನ್ನ ಹೃದಯದ ಚಲನೆ ವಿಲವಿಲನೆ
ನಲುಗುತಿದೆ ನಲವತೋರೇ !

ಎನ್ನುತಿರೆ, ಆ ಲಲನೆ ಕೈ ನೀಡೆ ಮೈಮರೆತನಾ ಹನುಮ
ಈ ಜನುಮ ಹುಟ್ಟಿದಕೆ ಫಲವಾಯ್ತು ಎಂದೆನುತ ಕೈಹಿಡಿದು
'ಏನು ಸೊಗಸೀ ತೋಳು ಇದನು ಪಿಡಿದರೆ ಬಾಳು ಉಳಿದೆಲ್ಲ
ಬರಿಗೋಳು' ಎನಲು ಆ ಕೈಸರಿದು ಅವನ ಕೆನ್ನೆಗೆ ಹರಿದು
ದವಡೆ ಹಲ್ಲನು ಮುರಿದು ಕೋಲಿಂದ ಹೊಡೆದು ಒನಕೆಯ
ತಲೆಗೆ ಬಡಿದಿತ್ತು ಬಳಿಕಲಾ ಲಾವಣ್ಯಸಾರೆ (ನನ್ನಯ
ಖಾತೆಯಲಿ-ಸೊಟ್ಟಸಣ್ಣಿ) ನನ್ನೆಡೆ ಬಂದು 'ಓ ಸೋಮಿ

ಆ ಸೊಟ್ಟ ಮುಸುಡಿ ಬಳಿ ಮಾರುವಾ ಹನುಮನೀದಿನ ಬಂದು
ಏನೇನೊ ಬೊಗಳುವುದೆ' ಎಂದೆನಲು ನಾನೆಂದೆ

'ತಪ್ಪಿದನು ಆ ಬೆಪ್ಪ, ಸುಪ್ಪಾಣಿ ಸಣ್ಣಕ್ಕ ಬಿಟ್ಟುಬಿಡು
ಇನ್ನಂತು ಅವನೆಂದಿಗೂ ಮಾಡ' ಎಂದು ಆಶ್ವಾಸನೆಯ ಕೊಟ್ಟ

'ಹನುಮನ ಬಿಟ್ಟುಕಳುಹು' ಎಂದಾಜ್ಞೆಯನು ಮಾಡಿದೆನು ಹಾಗಾಗಿ
ಹನುಮ ಕೈಕಾಲೊಡನೆ ಕುತ್ತಿಗೆಯ ಮೇಲೆ ಶಿರವನು ಉಳಿಸಿ ಬದುಕಿದನು.
ಬೈದೆ ಬಾಯಿಗೆ ಬಂದ ಹಾಗೆ ಹನುಮನ 'ಮಂಗ್ಯ, ಎಂಥ
ವೇದಾಂತಿಯೋ ನೀನೆಲವೊ? ಎಲೆ ಕಂತ್ರಿ, ಬಾಯಬ್ರಹ್ಮವ
ನುಡಿವೆ ಮಾಯೆಯಡುಗೆಯ ಮನೆಯ ಕರಿಬೆಕ್ಕೆ?'

'ಗುರುದೇವ, ಶಿರಕಾವ, ಪ್ರಾಣದಾತನೆ ತಂದೇ! ಒಂದು
ಸಂಶಯ ನಿನ್ನ ಮಾತಿನಲಿ ಮೂಡದೇ? ತತ್ತದಿಂದ್ರಿಯ ತನಗೆ
ತತ್ತ ವ್ಯಾಪಾರವನು ಮಾಡಿದರೆ ಕುಂದೇನು? ಅದರಿಂದ ಆತ್ಮ
ನಿರ್ಲಿಪ್ತನಲ್ಲವೆ? ಪ್ರಭುವೆ!'

'ಎಲೆಮೂಢ, ಆರೂಢ ಪದವಿಯಲಿ ಆ ಮಾತು ಬ್ರಹ್ಮವನು
ಅರಿತವನು ಸುಮ್ಮನೇ ಬಿದ್ದಿರುವ ಅರಿಗಳಾರನು ತರಿದು ಮೂರು
ಗುಣಗಳ ಮುರಿದು ಪರತರ ವಿರಕ್ತಿಯನು ಹೊಂದಿ ಮಾಯೆಯ ಹರಿದು
ಬಿಸುಟಿದರೆ ಆ ಮಾತ ಬಳಸ ಬೇಕೆಲೆ ಹೋತ ಇರುವುದೊಂದೇ
ದಾರಿ, ಎಲವೆಲವೋ ಉರಿಮಾರಿ ಅದನೆ ನಡೆದಿರಬೇಕು
ಇನ್ನೆಲ್ಲ ಬರಿಹೋಕು.'

* * * *

ಅಂದು ಸಂಜೆಗೆ ದಿವ್ಯ ಸುರೆಯ ನೀಂಟಿದ ಹನುಮ ಬಂದು
ದೇವಾಲಯದಿ ಕೀರ್ತನೆಯ ಮಾಡಿದನು ಕೀರ್ತನೆಯ ನಡೆಸುತ್ತ
ತತ್ವಕ್ಕೆ ಹಾರಿದನು ಅದ್ವೈತವೊಂದೆ ಪರಸತ್ಯವೆಂದಾಡಿದನು

'ಹರಿಕತೆಯಲೇನುಂಟು ಬರಿಹಾಳು ಒಣರಗಳೆ ಹರಿಭಕ್ತಿ
ಹರಭಕ್ತಿ ಬರಿಸುಳ್ಳು ಕರ್ಮವೋ ಒಳಗೆಲ್ಲ ಜೊಳ್ಳು ಸಗುಣದ
ಕಳ್ಳು ಕುಡಿದವನ ಸುಡಬೇಕು ಮೋಕ್ಷಕ್ಕೆ ಇರುವುದೊಂದೇ
ದಾರಿ ಜ್ಞಾನವೇ ಅದು' ಎಂದು ಏನೇನೋ ಬೊಗುಳಿದನು

'ನಾರದರ ಭಕ್ತಿಸೂತ್ರದಿ........' ಎಂದು ಮಾತೆತ್ತೆ

'ಯಾವ ನಾರದ, ಅವನು ಅರಿತುದೇನನು? ಬರಿದೆ ಒದರಿದನು
ಗಂಟಲಿನ ನರಹರಿದು ನಾರದ........' ಎಂದೆಲ್ಲ ತೆಗಳಿದನು.

'ಅಲ್ಲವೋ ಎಲೆ ಹನುಮ ಹರಿವಂಶ ಭಾಗವತ ವಿಷ್ಣುವಿನ
ಸರ್ವೋತ್ತಮತ್ವವನು ಹೊಗಳವೇ?' ಎಂದು ಕೇಳಿದೊಡಾಗ

‘ ಅದು ಯಾವ ಶೃತಿಸಿದ್ಧ ? ಎಲ್ಲಿಯ ಪುರಾಣ ? ಅದು ಬರಿ ‘ ರಾಣ ’-
ಕೊಳೆ,ರಾಡಿ ’ ಎಂದು ಗುಡುಗಿದ ಹನುಮ.

ಸಿಟ್ಟಿದ್ದ ಆಸ್ತಿಕರು ಕುಟ್ಟಿದರು ಆಂಜನಿಯ ಹೊಟ್ಟೆ
ಗುಟ್ಟಿದರವನ ಒದೆ ಹೆಚ್ಚಿ ತಲೆ ಬಿಚ್ಚಿ ಮಲಗಿದನು
ಹನುಮನಲ್ಲಿಯೆ ದೇವನಾಲಯದಿ ಬೆಳಗಾಗ ಎದ್ದೆನ್ನ ಬಳಿಗೆ
ಬಂದಿಂತೆಂದ ‘ ಇರುವುದೊಂದೇ ದಾರಿಯಲ್ಲವೇ ಗುರುದೇವ ? ’

‘ ಹೌದೆಲವೊ ಹನುಮಂತ ಸಾಧಕಗೆ ಗುರಿ ಸಿಕ್ಕೆ ಇರುವುದೊಂದೇ
ದಾರಿ. ಅವರವರ ನಿಶ್ಚಯಕೆ, ನಿನ್ನ ದಾರಿಯನವರು ಒಪ್ಪುವರೊ
ಬಿಡುವರೋ ನಿನಗೇಕೆ ಆ ಕಂತೆ, ಕಳೆದು ಬಿಸುಟೈ ಚಿಂತೆ ! ’

*   *   *   *   *

ಹನುಮಣ್ಣ ಕೆಲವು ದಿವಸದ ಹಿಂದೆ ನಮ್ಮೂರ ಕೆರೆಯಂಗಳದಲಿರುವ
ಅರಳಿಕಟ್ಟೆಯ ಮುಂದೆ ಕಂಡವನೆ ಕೈಮುಗಿದು “ ಮದ್ಗುರುವೆ
ಸದ್ಗುರುವೆ ಶರಣಾದೆ ದಯವಿರಲಿ ” ಎಂದು ವಂದಿಸಿ “ ಗುರುವೆ
ಹೇಗಿರುವೆ ಸೌಖ್ಯವೇ ? ” ಎನಲಾನು ನಸುನಕ್ಕು ‘ ಮಿತ್ರ,
ಆಂಜನ ಪುತ್ರ, ಸುಖದುಃಖವೆನಗೆಲ್ಲಿ ನಾನದ್ವಿತೀಯ ನಿರ್ಗುಣ
ಸಚ್ಚಿದಾನಂದ ರೂಪ ’ ಎನೆ ‘ ತಪ್ಪಾಯ್ತು ನಾನಂತು ಕೇಳಿದುದು
ವ್ಯವಹಾರ ಮೂಲಮೆನ್ನೀ ಪ್ರಶ್ನೆ ಸದ್ವಸ್ತು ಸೂಕ್ಷಿತಂ ತಾನಲ್ಲ ’
ಎಂದು ವಂದಿಸಿ ಕಟ್ಟೆಯಡಿಗೆ ಕುಳಿತಿದ್ದ.

‘ ಸಂಶಯಮದೇನದಕೆ ಸಚ್ಚಿದಾನಂದಾಂಶ ನಿರ್ಗುಣಬ್ರಹ್ಮದ
ಅಪಭ್ರಂಶ, ನೀನಾವ ಲೀಲಾವಿನೋದದಿಂದಿಂತಿಲ್ಲಿ ಉದ್ಭವಿಸಿ
ಒಡಮೂಡಿ ನಿಂತಿರುವೆ ? ’

‘ ಕೇಳೆನ್ನ ಸದ್ಗುರುವೆ ಇಂದು ನಿಮ್ಮೀ ಮಹಾಸುಗ್ರಾಮದೊಳ್
ನನ್ನದೊಂದು ಭಾಷಣಮಿಹುದು, ಮದ್ಯಪಾನ ನಿರೋಧ ಸಪ್ತಾಹ
ದಾಚರಣೆಗೆಂದು ಸರಕಾರಮನ್ನನು ಕರೆಯೆ, ಜಗವರಿಯೆ
ದೇಶಸೇವೆಯನೀಶ ಸೇವೆಯೆಂದೇ ಬಗೆದ ನಿನ್ನ ಈ ಡಿಂಗರಿಗ
ನಿಂದಿಲ್ಲಿ ಬಂದಿಹನು ದೇಶದುದ್ಧಾರಕೊಂದೇ ದಾರಿ ಮದ್ಯವನು....’
ಎಂದವನು ನುಡಿಯುತಿರೆ ನಾ ನಕ್ಕೆ

ಆ ಸಂಧ್ಯೆ ಸನ್ನಿಹಿತವಾಯ್ತು ದಿನಗತವಾಯ್ತು ಕುಡಿದ ರವಿ
ಕಣ್ಣು ಕೆಂಪಾಗೆ (ಅಂಜನಿಯಂತೆ) ಪಶ್ಚಿಮದಿ ಬಿದ್ದು ನಿದ್ದೆಯ ಹೊಡೆಹ
ಸರಕಾರದಧಿಕಾರವರ್ಗವದು ಘೇರಯಿಸೆ ಪಿಂಚಾರ
ಬಾಂಧವರು, ಬಣಜಾರಮಿತ್ರಕುಲ ಕೊಕಚಸಂಕುಲ ಕೊರಮ
ವೃಂದವದು ನೆರೆದಿತ್ತು ನಮ್ಮೂರ ಗೌಡನಿಗೆ ಕೀರ್ತಿಯನು ತಂದಿತ್ತು.

ಭಾಷಣಕೆ ಹನುಮಂತ ನಿಂತ ಅದಕೂ ಮೊದಲು ಜ್ಞಾನಾಗ್ನಿ
ಪಾನವನು ಮಾಡಿಯೇ ಬಂದಿದ್ದ ವಾಸನೆಯ ತಂದಿದ್ದ
ನಿಂದು ಮೇಜಿನ ಮುಂದೆ ಹೇಳಿದನು " ಮಿತ್ರರಿರ ನಮ್ಮೂರಿ
ಗಿಂದೊಂದು ಸಂಕ್ರಾಂತಿ ಸೇಕ್ದಾರ್ರು ಗೌಡ್ರು ನಂಶಾನ್ಭೋಗ್ರು (ಅಡ್ಬಿದ್ದೆ ನನ್ಗುರುವೆ)

ಇವರೆಲ್ಲ ನಿಮ್ಮ ಉದ್ಧಾರವನು ಮಾಡಲಿಕೆ ಮದ್ಯಪಾನ ನಿರೋಧ
ಮಾಡಬಾರದು ಎನುತ ಸಪ್ತಾಹ ಮಾಡಿಹರು ಕುಡಿತ ಬಲು ಕೆಟ್ಟ ಚಟ
ಋಷಿಗಳೂ ದೇವತಾ ಸಂಕುಲವು ಈ ಕೆಟ್ಟ ಕುಡಿತನ ಪ್ರವೃತ್ತಿಯನು
ಬಿಟ್ಟಿಂದು ಇರಲಿಲ್ಲ, ಲಾಲಿಸಿರಿ ನೀವೆ." ಎಂದು ಗಾಜಿನದೊಂದು
ಬಟ್ಟಲನ್ನು ತೆಗೆದಿಟ್ಟ ಅಂಗಿಂದೊಂದು ಸೀಸೆಯ ಹೊರಕೆ
ಎಳೆದದರ ಬಿರಟೆಯನು ಕಿತ್ತೆಸೆದ ಅದರಿಂದ ಸಾರಾಯ
ಧಾರೆಯನು ಸುರಿದು ಬಟ್ಟಲನೆತ್ತಿ ತುಟಿಗೆ ಪಾನವ ಮಾಡಿ ಅದ
ನೆಲಕೆ ಈಡಾಡಿ ಬಾಯೊರೆಸಿ ಚಪ್ಪರಿಸಿ ಹೇಳಿದನು

" ಕುಡಿಯದಿರೆ ಶಾಂತಿ ದೊರೆಕೊಳದೆಂಬ ಭ್ರಮೆಯಿಂದ ಕುಡಿಯುವೆವು
ನಾವಿಂತು ಕುಡಿಯಬಾರದು ಹೀಗೆ ಇರುವುದೊಂದೇ ದಾರಿ ಮದ್ಯ........"
ಪಕ್ಕದಲಿ ನಿಂತ ಗರ್ವೋದ್ಧತಂ, ನಟನಿಟಿಲ ಕೀಲಾಕ್ಷಿವೋಲುರಿವ
ಕೆಂಗಣ್ಣ ಪೋಲೀಸ, ಬಹು ರೇಗಿ ಲಾಠಿಯಿಂ ಅಂಜನಿಯನಪ್ಪಳಿಸೆ
ನೆಲಕುರುಳ್ದಂ ಹನುಮ ಬಿಕ್ಕಳಿಸಿ ಚೀರುತ್ತೆ.

ಅಲ್ಲಿಯೇ ಮಲಗಿದ್ದ ನಿರುಳೆಲ್ಲ ಪ್ರಿಯಮಿತ್ರ ದೃಢಸತ್ವ
ನಂಜನಾಪುತ್ರ ನಾಗಸದಡಿಗೆ ಬೆಳಗಾಗಿ ಮೇಲೆದ್ದು ಮೈಯ
ಧೂಳನು ಕೊಡಹಿ ಬಂದು ನನ್ನೆಡೆಗೆ ಕೈಮುಗಿದು ಬೆಸಗೊಂಡ

' ನಮೊ ನಮೋ ಗುರುನಾಥ ಭವ ಭಯತ್ರಾತ
ನಮೊ ನಮೋ ಶರಣಾದೆ ಕೇಳೆನ್ನ ಮಾತ
ಸಾಕಿನ್ನು ಭವಬಂಧ ಇದು ಹರಿಯದೇಕೆ
ಮಾಯೆಯೀ ಬಲೆ ಇನ್ನು ಮುರಿಯದಿಹುದೇಕೆ
ನಿನ್ನ ಬೋಧಾಮೃತವ ಕೇಳಿದೀಕಕವ
ಇನ್ನು ದುಃಖದ ದೂರವಿರಿಸಿ ಈ ಮುಖವ
ಮೇಲೆತ್ತಿ ಆನಂದದಲಿ ಮುಳುಗನೇಕೆ
ದಾರಿಯಾವುದು ವಿವೇಕವನು ಪಡೆಯಲಿಕೆ '

" ಇರುವುದೊಂದೇ ದಾರಿ ಮಿತ್ರ ಅಂಜನ ಪುತ್ರ
ಹೇಳುವರೆ ಕೇಳುವರೆ ಗೋಚರಿಸದಂತಹದು, ಕ್ಷುರಧಾರೆ
ಯಂತೆ ಬಹು ತೀಕ್ಷ್ಣ ಕೇಳೆಲೆ ಕಳವ, ಒದೆ ತಿಂದು
ತಲೆಯೊಡೆಯೆ ತಾನಾಗಿ ತಿಳಿಯುವುದು ಅನುಭವದಿ ಬೆಳಗುವುದು "
ಎಂದವನ ಬೀಳ್ಕೊಟ್ಟೆ

—ಕವಿಕುಲ ಲಾಮ